# ಪ್ರಜಾ ಮಾಹಿತಿ

[ಗ್ರಾಹಕ ಹಕ್ಕು ಶಿಕ್ಷಣ ಮತ್ತು ಜಾಗ್ರತಿ ವೇದಿಕೆಯ ಮಾಹಿತಿ ಹಕ್ಕು ವಿಷಯಕ್ಕೆ ಮೀಸಲಾದ ತ್ರೈಮಾಸಿಕ ಪತ್ರಿಕೆ]

ಜುಲೈ–ಸೆಪ್ಟೆಂಬರ್ **2007** ಸಂಚಿಕೆ **3/2007**


## ಮಾಹಿತಿ ಕಾಯ್ದೆಯಿಂದ–ಉತ್ತರ ಪ್ರದೇಶದ ಹಳ್ಳಿಯಲ್ಲಿ 'ಬೆಳಕು'!

ಉತ್ತರ ಪ್ರದೇಶದ ಬುಂದೇಲ್ ಕಂಡ್ ವಲಯ. ಅಲ್ಲಿ ಬಂಡಾ ಜಿಲ್ಲೆ. ಅದರಲ್ಲಿ ನರೈನಿ ಎಂಬುದೊಂದು ಹಳ್ಳಿ. ಸ್ವಾತಂತ್ರ್ಯ ಬಂದು ಆರು ದಶಕಗಳು ಕಳೆದಿದ್ದರೂ ಆ ಊರಲ್ಲಿ ಅಂತಹ ಬದಲಾವಣೆಗಳೇನೂ ಆಗಿರಲಿಲ್ಲ. ನಾಗರಿಕ ಸೌಲಭ್ಯಗಳ ಕೊರತೆ, ಕಳಪೆ ರಸ್ತೆ, ಮಾನವ ವಾಸಿಸಲು ಅನರ್ಹವಾದ ವಾತಾ ವರಣಗಳೇ ಅಲ್ಲಿನ ಆಸ್ತಿಯಾಗಿತ್ತು. ಹಳ್ಳಿಗರು ನಾನಾ ಮಾದರಿಯಲ್ಲಿ ಪ್ರತಿಭಟನೆ ಮಾಡಿದ್ದರಾದರೂ ಕಿವಿಗೆ ಹಾಕಿ ಕೊಂಡವರು ಯಾರೂ ಇರಲಿಲ್ಲ. ಅವರ ಕೈಗೆ ಮಾಹಿತಿ ಹಕ್ಕು ಕಾಯ್ದೆಯ ಅಸ್ತ್ರ ಸಿಕ್ಕಿತು ನೋಡಿ, ಕೇವಲ ಮೂರೇ ತಿಂಗಳಲ್ಲಿ ಎಲ್ಲವೂ ಬದಲಾಯಿತು!

ಸುತ್ತಮುತ್ತಲಿನ ಎಂಟು ಹಳ್ಳಿಗಳ 14 ಸಾವಿರ ಗ್ರಾಮೀಣ ಜನತೆ ಜಿಲ್ಲಾಕೇಂದ್ರ ಬಂಡಾದಿಂದ 60 ಕಿ.ಮೀ. ದೂರ ದಲ್ಲಿದ್ದರು. ವಾಸ್ತವವಾಗಿ ಇಡೀ ವಿಶ್ವದೊಂದಿಗೆ ಅವರಿಗೆ ಸಂಪರ್ಕವೇ ಇರಲಿಲ್ಲ. ವಿದ್ಯುತ್ ಇಲ್ಲ. ರಸ್ತೆ ಇಲ್ಲ. ಕೊನೆಗೆ ಅವರನ್ನು ಸುತ್ತುವರಿದಿದ್ದ ಎರಡು ನದಿಗೆ ಸೇತುವೆಯೂ ಇರಲಿಲ್ಲ. ಮಳೆಗಾಲದಲ್ಲಿ ಪ್ರವಾಹದ ಕಾಟ ಬೇರೆ. ಅತಿ ಹತ್ತಿರದ ಆರೋಗ್ಯ ಕೇಂದ್ರ ಕೇವಲ 15 ಕಿ.ಮೀ. ಆಚೆಗಿತ್ತು! ಮಕ್ಕಳು ಪ್ರಾಥಮಿಕ ಶಾಲೆಗೆ ಹೋಗಲು 2 ಕಿ.ಮೀ. ದುರ್ಗಮ ರಸ್ತೆಯಲ್ಲಿ ಸಾಗಬೇಕಿತ್ತು. ಜುಲೈ 2006, ನರೈನಿಯ ಗ್ರಾಮಸ್ಥರೆಲ್ಲ ಸೇರಿ ಬಂಡಾದ ಜಿಲ್ಲಾ ಕಲೆಕ್ಟರರಿಗೆ ಮತ್ತು ಚಿತ್ರಕೂಟ್ ವಿಭಾಗದ ಕಮಿಷನರ್‌ರಿಗೆ ಮಾಹಿತಿ ಹಕ್ಕಿನ ಕಾಯ್ದೆಯಡಿ ಅರ್ಜಿ ಸಲ್ಲಿಸಿದರು. ಕಳೆದ ವರ್ಷ ಬಂಡಾ (District Magistrate) ಅವರಲ್ಲಿಗೆ ಭೇಟಿಯಿತ್ತ ನಂತರ ನೀಡಿದ ಆದೇಶಗಳ ಪ್ರತಿಗಳು, ತಮ್ಮ ಊರಿಗೆ ಎಂದು ಬಿಡುಗಡೆಯಾದ ಧನಸಹಾಯ ಖರ್ಚಾದ ಲೆಕ್ಕಗಳನ್ನು



ಅವರು ಕೇಳಿದ್ದರು.ಅಚ್ಚರಿ! ಸೆಪ್ಟೆಂಬರ್ ವೇಳೆಗೆ ಸೇತುವೆ ಮತ್ತು ಸಂಪರ್ಕ ರಸ್ತೆಯ ನಿರ್ಮಾಣ ಆರಂಬ ವಾಯಿತು. ಸದ್ಯ ಊರಿಗೆ ವಿದ್ಯುದೀ ಕರಣದ ಸಂಭ್ರಮ!

ಆಗಿದ್ದೇನು? ವಿದ್ಯಾದಾನ ಸಮಿತಿ ಎಂಬ ಸಾರ್ವಜನಿಕ ಸಂಘಟನೆ ಚಂದಾಪುರ ಎಂಬಲ್ಲಿನ ಸಾಮಾಜಿಕ ಕಾರ್ಯಕರ್ತರ ಸಹಕಾರದಿಂದ ನರೈನಿಯ ಹಳ್ಳಿಗರಿಗೆ 2002ರಿಂದಲೇ ಅವರ ಹಕ್ಕುಗಳ ಬಗ್ಗೆ ಶಿಕ್ಷಣ ನೀಡಲು ಆರಂಭಿಸಿತ್ತು. ಎರಡು ವರ್ಷ ಕ್ರಮಿಸುವಷ್ಟರಲ್ಲಿ ಅಲ್ಲಿನ ಜನ ಧರಣಿಗಳನ್ನು ಸಂಘಟಿಸುವಷ್ಟರ ಮಟ್ಟಿಗೆ ವಿಶ್ವಾಸ ಪಡೆದರು. ಕಮಿಷನರ್‌ರನ್ನು ಘೇರಾವ್ ಮಾಡಿದರು. ಮೆರವಣಿಗೆ ಯಲ್ಲಿ ಹೋಗಿ ತಮ್ಮ ರಸ್ತೆ, ಸೇತುವೆ, ವಿದ್ಯುತ್ ಹಕ್ಕುಗಳನ್ನು ಒದಗಿಸಲು ಒತ್ತಾಯಿಸಿದರು.ಕಳೆದ ವರ್ಷ ಗಣರಾಜ್ಯೋತ್ಸವ ದಿನ ಮಹಾತ್ಮ ಗಾಂಧಿ ಮತ್ತು ಸುಭಾಷ್‌ಚಂದ್ರ ಭೋಸ್‌ರ ಫೋಟೋ ಮುಂದೆ ನಿಂತು ಗೋಳಾಟ ನಡೆಸಿ ಸುದ್ದಿ ಮಾಡಿದರು.

ಈ ವಿಶಿಷ್ಟ ಪ್ರತಿಭಟನೆ ಅಧಿಕಾರಿ ಗಳನ್ನು ಇವರ ಹಳ್ಳಿಗೆ ಹೋಗುವಂತೆ ಮಾಡಿತು. ಆಗ ದಕ್ಕಿದ್ದು ಬರೀ ಸರ್ವೆ, ಯೋಜನೆಗಳ ಪೇಪರ್ ಕೆಲಸ ಮಾತ್ರ. ಈ ಹಂತದಲ್ಲಿ ಇವರಿಗೆ ಮಾಹಿತಿ ಹಕ್ಕಿನ ಕಾಯ್ದೆ ಬಗ್ಗೆ ತಿಳಿಸಿಕೊಡಲಾಯಿತು. ನಂತರದ್ದೇ ಜುಲೈ 2006ರ ಮುಂದಿನ ಸುವರ್ಣ ದಿನಗಳು! ನರೈನಿ ನಿವಾಸಿ ರಾಮ್ ಅವತಾರ್ ಹೇಳುತ್ತಾರೆ, "ನಾವು ಮೊದಲ ಸುತ್ತಿನ ಯುದ್ಧ ಗೆದ್ದಿದ್ದೇವೆ. ಕೈಯಲ್ಲಿ ಮಾಹಿತಿ ಹಕ್ಕಿನ ಅಸ್ತ್ರ ಇರುವುದರಿಂದ ಸಾಧ್ಯವಾಯಿತು. ನಾವು ಹಳ್ಳಿಗೆ ಎಲ್ಲವನ್ನೂ, ಯಾರಲ್ಲೂ ಬೇಡದೆ ಕೆಲಸ ಮಾಡಿಸಿ ಕೊಂಡೆವು ಎಂಬುದು ಮುಖ್ಯ." ಈಗ ಇವರೆಲ್ಲ ಸೇರಿ ಚಿಂಗಾರಿ ಎಂಬ ಕಾರ್ಯಪಡೆ ರಚಿಸಿಕೊಂಡಿದ್ದಾರೆ. ಮಾಹಿತಿ ಹಕ್ಕು ಹೊಸ ಬೆಳಕು ನೀಡುತ್ತದೆಂಬುದು ಈಗ ಶತಸಿದ್ಧ.

**ಮುಂದಿನ ಪುಟಗಳಲ್ಲಿ >>>>>>>**


ಮಾಹಿತಿ ಕಾಯ್ದೆ ವ್ಯಾಪ್ತಿಯಲ್ಲಿ ಷೇರು ವಿನಿಮಯ ಕೇಂದ್ರ –3
ಪಾರ್ಲಿಮೆಂಟ್ ಅಧಿವೇಶನ– ಒಂದು ಅಂಕಿಅಂಶ! –4
ಮಾಹಿತಿ ಸರಬರಾಜು– ಬಲಪಡಿಸುವ ಕಾರ್ಯಸೂಚಿ –5
ಅರಿವಿನ ಹಕ್ಕು ದಿನ–ಏನಿದು? –6

## ಅಂಕಗಳಿಕೆ ವಿವರ – ಬಹಿರಂಗ ಕಡ್ಡಾಯ

ಆ ದಿನಗಳಲ್ಲಿ ಪರೀಕ್ಷೆಗೆ ಹಾಜರಾದ ವಿದ್ಯಾರ್ಥಿಗಳು ಮತ್ತು ಭಡ್ತಿಗಾಗಿ ಇಲಾಖಾ ಪರೀಕ್ಷೆಗಳನ್ನು ತೆಗೆದುಕೊಂಡ ಉದ್ಯೋಗಿಗಳು ಫಲಿತಾಂಶವನ್ನು ತಿಳಿಯಬಹುದಿತ್ತು. ಆದರೆ ಅವರು ಗಳಿಸಿದ ಅಂಕಗಳ ಪಟ್ಟಿಯನ್ನು ಕೊಡುತ್ತಿರಲಿಲ್ಲ. ಒಟ್ಟಾರೆ ವ್ಯವಸ್ಥೆಯೇ ಗೊಂದಲಮಯ



ವಾಗಿದ್ದುದರಿಂದ, ಕೊನೆಗೆ ಈ ಮಾಹಿತಿಗಳನ್ನು ಯಾರಿಂದ ಪಡೆಯಲು ಸಾಧ್ಯವೆಂಬುದು ಕೂಡ ಗೊತ್ತಾಗದೆ ಕೈಚೆಲ್ಲಬೇಕಾಗುತ್ತಿತ್ತು. ಅನುತ್ತೀರ್ಣತೆಯ, ಭಡ್ತಿ ನಿರಾಕರಿಸಿದ್ದಕ್ಕೆ ಕಾರಣ ತಿಳಿಯು ತ್ತಿರಲಿಲ್ಲ. 2005ರ ಮಾಹಿತಿ ಹಕ್ಕು ಕಾಯ್ದೆ ಕ್ರಾಂತಿಯನ್ನೆ ಮಾಡಿದ್ದು,ಅಂಕಗಳ ವಿವರ ವಲ್ಲದೆ ಭಡ್ತಿಗೆ ಅಗತ್ಯವಾದ ಮಾನದಂಡಗಳ ಪಟ್ಟಿಯನ್ನು ಪಡೆಯಬಹುದು.

ಕೇಂದ್ರ ಮಾಹಿತಿ ಆಯೋಗ (ಸಿಐಸಿ) ಕಳೆದ ಜೂನ್ 25, 2007ರಂದು ಪ್ರಮುಖ ನಿರ್ದೇಶನಗಳನ್ನು ಈ ಸಂಬಂಧ ಇತ್ತಿದೆ. ಇನ್ಶೂರೆನ್ಸ್ ಕಂಪನಿ ಎಲ್‌ಐಸಿಗೆ ಭಡ್ತಿ ಪರೀಕ್ಷೆಯಲ್ಲಿ ಪಾಲ್ಗೊಂಡ ಉದ್ಯೋಗಿ ಗಳಿಸಿದ ಅಂಕಗಳ ವಿವರ ಒದಗಿಸಲು ಸಿಐಸಿ ಆದೇಶಿಸಿದೆ. ನಾಸಿಕ್‌ನ ಜಿತೇಂದ್ರ ಕುಮಾರ್ ಎಲ್‌ಐಸಿಗೆ ಅರ್ಜಿ ದಾಖಲಿಸಿ ಕೆಳಗಿನ ವಿಚಾರಗಳಲ್ಲಿ ಮಾಹಿತಿ ಕೇಳಿದ್ದರು.

- ಲಿಖಿತ ಪರೀಕ್ಷೆಯಲ್ಲಿ ಆತ ಗಳಿಸಿದ ಅಂಕ.
- ಸಂದರ್ಶನಕ್ಕೆ ನಿಗದಿತವಾದ ಅಂಕ ಮತ್ತು ಆತನಿಗೆ ಲಭಿಸಿದ ಅಂಕ.
- ಎಡಿಓಗೆ ಸೇರ್ಪಡೆಯಾದ ಅಭ್ಯರ್ಥಿಗಳು ಲಿಖಿತ ಹಾಗು ಸಂದರ್ಶನದಲ್ಲಿ ಗಳಿಸಿದ ಅಂಕಗಳ ಪ್ರತ್ಯೇಕ ವಿವರ.
- ಆಯ್ಕೆಗೆ ನಿಗದಿಪಡಿಸಿದ ಅಂಕ.

ಮೊದಲಿನೆರಡು ವಿಷಯಗಳಲ್ಲಿ ಎಲ್‌ಐಸಿಯ ಸಾರ್ವಜನಿಕ ಮಾಹಿತಿ ಅಧಿಕಾರಿ ಮಾಹಿತಿ ಒದಗಿಸಿದರು. ಆಯ್ಕೆಗೆ ನಿಗದಿಪಡಿಸಿದ ಅಂಕಗಳ ಬಗ್ಗೆ ಮಾಹಿತಿ ಕೊಡಲಿಲ್ಲ. ಹಾಗಾಗಿ ಸಿಐಸಿಯಲ್ಲಿ ಮೇಲ್ಮನವಿ ಸಲ್ಲಿಸಲಾಯಿತು. ಎಲ್‌ಐಸಿ ಪ್ರಕಾರ, ಯಶಸ್ವಿ ಅಭ್ಯರ್ಥಿಗಳು ಗಳಿಸಿದ ಅಂಕಗಳ ಮಾಹಿತಿ, ಪರೀಕ್ಷಾ ಪದ್ಧತಿಯನ್ನು ಬಹಿರಂಗ ಪಡಿಸುವುದು ಬಾಹಿರ. ಈ ವಾದವನ್ನು ಒಪ್ಪದ ಕೇಂದ್ರ ಮಾಹಿತಿ ಆಯೋಗ ಎಲ್ಲ ಪರೀಕ್ಷೆಗಳಲ್ಲೂ ಯಶಸ್ವಿ ಅಭ್ಯರ್ಥಿಗಳು ಗಳಿಸಿದ ಅಂಕಗಳ ವಿವರ, ನಿಗದಿತ ಅಂಕದ ಮಾಹಿತಿಗಳನ್ನು ಬಹಿರಂಗಪಡಿಸಲೇಬೇಕು ಎಂದು ಅಭಿಪ್ರಾಯಪಟ್ಟಿತು. ಈ ಹಿನ್ನೆಲೆಯಲ್ಲಿ ಸಿಐಸಿ ಎಲ್‌ಐಸಿಗೆ ಯಶಸ್ವಿ ಅಭ್ಯರ್ಥಿಗಳ ಅಂಕಗಳನ್ನು ಬಹಿರಂಗಪಡಿಸಲು, ವೈಯುಕ್ತಿಕತೆ ಕಾಪಾಡಲು ಅಧಿಕಾರಿಗಳ ಹೆಸರು ಪ್ರಕಟಿಸದಿರಲು ಸೂಚಿಸಿ ಆದೇಶವಿತ್ತಿದೆ.

(ಮನವಿ ಸಂಖ್ಯೆ 615/ಐಸಿಪಿಬಿ/2007/ಎಫ್.ನಂ.ಪಿಬಿಎ/249, ದಿನಾಂಕ25 ಜೂನ್ 2007)

## ಮಾಹಿತಿ ನೀಡದ ಮಾಹಿತಿ ಆಯೋಗ!

ದೀಪದ ಬುಡ ಕತ್ತಲೆ ಎಂಬ ಮಾತೇನೋ ಇದೆ. ಆದರೆ ಇದನ್ನು ಮಾಹಿತಿ ಆಯೋಗಕ್ಕೂ



ಅನ್ವಯಿಸುವಂತಾಗಿದೆ ಎಂಬುದೇ ದುರಂತ. ವಾಸ್ತವವಾಗಿ ಮಾಹಿತಿ ಆಯೋಗಗಳದ್ದು ಹೆಚ್ಚು ಕಡಿಮೆ ನ್ಯಾಯಾಂಗದ ಅಧಿಕಾರ. ಆ ಮೂಲಕ ಅವು ಸಮರ್ಪಕವಾಗಿ ಮಾಹಿತಿ ಅವಶ್ಯಕತೆ ಈಡೇರಿಸಲಿ ಎಂಬ ಆಶಯ. ಆದರೆ ಇದೀಗ ಪಶ್ಚಿಮ ಬಂಗಾಳದ ರಾಜ್ಯ ಮಾಹಿತಿ ಆಯೋಗವೇ ಮಾಹಿತಿ ನೀಡಲು ನಿರಾಕರಿಸಿದ ಸುದ್ದಿ ಬಂದಿದೆ.

ಪಶ್ಚಿಮ ಬಂಗಾಳದ ಅಶೋಕ್ ಮಾನ್ನಾತಾ ಅಲ್ಲಿನ ಮಾಹಿತಿ ಆಯೋಗಕ್ಕೆ ಅರ್ಜಿ ಸಲ್ಲಿಸಿ, ರಾಜ್ಯದಲ್ಲಿ ಮಾಹಿತಿ ಹಕ್ಕು ಕಾಯ್ದೆ ಅಡಿ ದಾಖಲಾದ ಅರ್ಜಿಗಳ ಸಂಖ್ಯೆ ಮತ್ತು ಈವರೆಗೆ ಇತ್ಯರ್ಥವಾದ ಪ್ರಕರಣಗಳ ಅಂಕಿಅಂಶಗಳನ್ನು ಕೋರಿದ್ದರು. ಆಯೋಗದ ಕಾರ್ಯದರ್ಶಿ, ತಾವು ಕೇಳಿದ ಮಾಹಿತಿ ನೀಡುವ ಸ್ಥಿತಿಯಲ್ಲಿಲ್ಲ ಎಂದೇ ಉತ್ತರಿಸಿದ್ದಾರೆ!

ಆಯೋಗದ ಪತ್ರದ ಪ್ರಕಾರ, 'ನೀವು ಕೇಳಿದ ಮಾಹಿತಿ ಒದಗಿಸಲು ನಾವು ಸಾಧ್ಯವಾದಷ್ಟು ಪ್ರಯತ್ನಿಸಿದೆವಾದರೂ ಸಮಯಮಿತಿಯಲ್ಲಿ ಅದು ಕೈಗೂಡುತ್ತಿಲ್ಲ. ಆಯೋಗದ ಎಲ್ಲ ದಾಖಲೆಗಳ ನಿರ್ವಹಣೆ ಮಾನವಶಕ್ತಿ ಆಧರಿಸಿದ್ದು, ಕಛೇರಿಯ ಹಲವು ಕೆಲಸಗಳಲ್ಲಿ ಅದರ ಹಂಚಿಕೆಯಾಗಿದೆ. ಹೀಗಾಗಿ ಉಳಿದ ಕೆಲಸಗಳು ವಿಳಂಬವಾಗುತ್ತಿದೆ.' ಆಯೋಗ ಅರ್ಜಿದಾರರ ಮೇಲೆ ಸ್ವಲ್ಪ ದಯೆ ತೋರಿದೆ! ನೇರವಾಗಿ ಕಛೇರಿಗೆ ಬಂದು ಅಗತ್ಯ ದಾಖಲೆಗಳಲ್ಲಿ ಕಣ್ಣಾಡಿಸಿ ಅವರಿಗೆ ಬೇಕಾದ ಮಾಹಿತಿ ಪಡೆದುಕೊಳ್ಳಲು ಸೂಚಿಸಿದೆ. ಪ್ರಶ್ನೆ ಅದಲ್ಲ, ಇದೇಕಾರಣ ಒಡ್ಡಿ ಸರ್ಕಾರಿ ಇಲಾಖೆಗಳು ಮಾಹಿತಿ ನೀಡಲು ವಿಳಂಬಿಸಿದರೆ ಶಿಕ್ಷಿಸಬೇಕಾದ ಆಯೋಗ ಕಠಿಣ ನಿರ್ಧಾರ ತೆಗೆದು ಕೊಳ್ಳುತ್ತದೆಯೇ?

# ಮಾಹಿತಿ ಕಾಯ್ದೆ ವ್ಯಾಪ್ತಿಯಲ್ಲಿ ಷೇರು ವಿನಿಮಯ ಕೇಂದ್ರ

ಇತ್ತೀಚೆಗೆ ಕೇಂದ್ರ ಮಾಹಿತಿ ಆಯೋಗ ನೀಡಿದ ಮಹತ್ವದ ತೀರ್ಪಿನ ಪ್ರಕಾರ, ದೇಶದ ಷೇರು ವಿನಿಮಯ ಕೇಂದ್ರಗಳೂ ಮಾಹಿತಿಹಕ್ಕು ಕಾಯ್ದೆ –(ಆರ್‌ಟಿಐಎ) ಅಡಿಯಲ್ಲಿ ಬರುತ್ತವೆ. ಜೈಪುರ ಸ್ಟಾಕ್ ಎಕ್ಸ್‌ಚೇಂಜ್‌ನ ಮನವಿಯನ್ನು ಕೈಗೆತ್ತಿಕೊಂಡಿದ್ದ ಕೇಂದ್ರ ಆಯೋಗ 'ಷೇರು ವಿನಿಮಯ ಕೇಂದ್ರಗಳು ಆರ್‌ಟಿಐಎ, 2005ರ ಸೆಕ್ಷನ್ 2(ಹೆಚ್) ಅನ್ವಯ ಸಾರ್ವಜನಿಕ ಪ್ರಾಧಿಕಾರ ಎಂದು ಪರಿಗಣಿಸಲಾಗುತ್ತದೆ. ಹಾಗಾಗಿ ಮಾಹಿತಿ ನೀಡಲು ಇವು ಸಿದ್ಧವಾಗಿರಬೇಕು' ಎಂದು ಅಭಿಪ್ರಾಯಪಟ್ಟಿದೆ. ಅಲ್ಲದೆ ಜೈಪುರ ಷೇರು ವಿನಿಮಯ ಕೇಂದ್ರ ಮತ್ತು ರಾಷ್ಟ್ರೀಯ ಷೇರು ವಿನಿಮಯ ಕೇಂದ್ರಗಳು ಒಂದು ತಿಂಗಳೊಳಗೆ ಅಗತ್ಯ ವ್ಯವಸ್ಥೆಗಳನ್ನು ಮಾಡಿಕೊಳ್ಳಬೇಕು ಎಂದೂ ಆದೇಶಿಸಿದೆ. ದೇಶದ ಉಳಿದ ಷೇರು ವಿನಿಮಯ ಕೇಂದ್ರಗಳೂ ಮೂರು ತಿಂಗಳೊಳಗೆ ಸಾರ್ವಜನಿಕರು ಮಾಹಿತಿ ಕಾಯ್ದೆಯಡಿ ಸಲ್ಲಿಸುವ ಅರ್ಜಿಗಳಿಗೆ ಉತ್ತರಿಸುವ ವ್ಯವಸ್ಥೆ ಮಾಡಿಕೊಳ್ಳಬೇಕೆಂದು ಸೂಚಿಸಿದೆ.



ಜೈಪುರದ ಷೇರು ವಿನಿಮಯ ಕೇಂದ್ರ(ಜೆಎಸ್‌ಇ) ವಿರುದ್ಧ ರಾಜ್ ಕುಮಾರಿ ಅಗರ್‌ವಾಲ್ ಆವರ ದೂರು, ರಾಷ್ಟ್ರೀಯ ಷೇರು ವಿನಿಮಯ ಕೇಂದ್ರ (ಎನ್‌ಎಸ್‌ಇ)ದ ವಿರೋಧವಾಗಿ ಕೆ.ಲಾಲ್‌ರ ಮನವಿ ಮತ್ತು ಬಾಂಬೆ ಷೇರು ವಿನಿಮಯ ಕೇಂದ್ರ(ಬಿಎಸ್‌ಇ)ದ ಕುರಿತ ಯೋಗೇಶ್ ಮೆಹ್ತಾರ ಅರ್ಜಿಗಳನ್ನು ಒಮ್ಮೆಗೇ ವಿಚಾರಣೆಗೆ ತೆಗೆದುಕೊಂಡ ಕೇಂದ್ರ ಮಾಹಿತಿ ಆಯೋಗದ ಮುಖ್ಯ ಪೀಠ ಈ ತೀರ್ಮಾನವನ್ನು ಪ್ರಕಟಿಸಿದೆ. ಬಿಎಸ್‌ಇ ಆರ್‌ಟಿಐಎ ಅಡಿಗೆ ಬರುವುದೇ ಅಥವಾ ಮಹಾರಾಷ್ಟ್ರದ 2003ರ ರಾಜ್ಯ ಮಾಹಿತಿ ಕಾನೂನಿನ ವ್ಯಾಪ್ತಿಗೆ ಒಳಪಡುವುದೇ ಎಂಬುದು ಮೆಹ್ತಾರ ಪ್ರಶ್ನೆಯಾಗಿದ್ದರೆ ಉಳಿದಿಬ್ಬರು ಜೆಎಸ್‌ಇ ಹಾಗೂ ಎನ್‌ಎಸ್‌ಇ ಆರ್‌ಟಿಐಎ ಪರಿಧಿಗೆ ಒಳಪಡುವುದೇ ಎಂಬ ಬಗ್ಗೆ ತೀರ್ಪು ಕೋರಿದ್ದರು.

ಷೇರು ವಿನಿಮಯ ಕೇಂದ್ರಗಳು ಮಾಹಿತಿ ಕಾಯ್ದೆಗೆ ಒಳಪಡುವುದರಿಂದ ಇನ್ನೊಂದು ಅಪಾಯವಿದೆ ಎನ್ನುವುದು ಕೆಲವರ ವಾದ. ಆರ್‌ಟಿಐಎ ಮೂಲಕ ಸಾರ್ವಜನಿಕ ಸಂಘಗಳ ಸೋಗಿನವರು, ವಂಚಕ ವ್ಯಾಪಾರಿ ಅಥವಾ ಏಜೆಂಟರು ಮಾಹಿತಿ ಪಡೆದು ಷೇರು ಮಾರುಕಟ್ಟೆಯಲ್ಲಿ ಅನೀತಿಯ ವ್ಯಾಪಾರ ಮಾಡಬಹುದು ಎಂಬ ಸಂಶಯ ದಟ್ಟವಾಗಿತ್ತು. ಕಾಯ್ದೆ ಇಂತಹ ಕೃತ್ಯಗಳ ವಿರುದ್ಧ ಸಾಕಷ್ಟು ರಕ್ಷಣಾ ವ್ಯವಸ್ಥೆ ಹೊಂದಿರುವಾಗ ಭಯ ಅನವಶ್ಯ. ಉದಾಹರಣೆಗೆ, ಮೂರನೇ ವ್ಯಕ್ತಿಯ ವ್ಯಾಪಾರಿ ಗುಟ್ಟು ಅಥವಾ ಭೌದ್ಧಿಕ ಆಸ್ತಿ, ಇಲ್ಲವೇ ಇತರರ ಸ್ಪರ್ಧಾತ್ಮಕ ಅವಕಾಶವನ್ನು ಹಾಳು ಮಾಡಬಲ್ಲಂತ ಮಾಹಿತಿಯನ್ನು ಕಾಯ್ದೆಯ ವ್ಯಾಪ್ತಿಯಿಂದ ಹೊರಗಿಡಲಾಗಿದೆ. ಪ್ರಾಧಿಕಾರಕ್ಕೆ ಕೇಳಿದ ಮಾಹಿತಿ ಸಾರ್ವಜನಿಕ ಹಿತಾಸಕ್ತಿಯದ್ದು ಎನ್ನುವುದು ಸ್ಪಷ್ಟವಾದರೆ ಮಾತ್ರ ಮಾಹಿತಿ ನೀಡಲಾಗುವುದರಿಂದ ಹೆದರಿಕೆ ಅರ್ಥವಿಲ್ಲದ್ದು ಎಂದು ಮಾಹಿತಿ ಆಯೋಗ ಸಮರ್ಥಿಸಿಕೊಂಡಿದೆ.

## ಹೈಕೋರ್ಟ್ ತಡೆಯಾಜ್ಞೆ

ಷೇರು ವಿನಿಮಯ ಕೇಂದ್ರಗಳನ್ನು ಮಾಹಿತಿ ಕಾಯ್ದೆಯಡಿ ತರಲಿದ್ದ ಕೇಂದ್ರ ಮಾಹಿತಿ ಆಯೋಗದ ತೀರ್ಪಿಗೆ ದೆಹಲಿ ಹೈಕೋರ್ಟ್ ತಡೆಯಾಜ್ಞೆ ನೀಡಿದೆ. ಕೇಂದ್ರ ಷೇರು ವಿನಿಮಯ ಕೇಂದ್ರ ಎನ್‌ಎಸ್‌ಇಯ ಮನವಿಯನ್ನು ಆಲಿಸಿದ ಜಸ್ಟೀಸ್ ಬಿ.ಡಿ.ಅಹ್ಮದ್‌ರ ಏಕ ವ್ಯಕ್ತಿ ನ್ಯಾಯಪೀಠ ಈ ಆಜ್ಞೆ ಹೊರಡಿಸಿದೆ. ಅಲ್ಲದೆ ಸೆಬಿ (SEBI) ಮತ್ತು ಕೇಂದ್ರ ಮಾಹಿತಿ ಆಯೋಗಗಳ ಅಭಿಪ್ರಾಯ ಕೇಳಿ ನೋಟಿಸ್ ಜಾರಿಗೊಳಿಸಿದೆ.

ಕೇಂದ್ರ ಮಾಹಿತಿ ಆಯೋಗದ ತೀರ್ಪನ್ನು ಪ್ರಶ್ನಿಸಿರುವ ಎನ್‌ಎಸ್‌ಇ, ಜಾಗತಿಕ ಮಾರುಕಟ್ಟೆ ವ್ಯವಸ್ಥೆಯ ಎನ್‌ಎಸ್‌ಇ ಕಾಯ್ದೆಯಲ್ಲಿ ಹೇಳಲಾದ 'ಪ್ರಭುತ್ವ'ದ ವ್ಯಾಖ್ಯೆಗೆ ಬರುವುದಿಲ್ಲ. ಹಾಗಾಗಿ ಆರ್‌ಟಿಐ ಅನ್ವಯವಾಗದು. ಎನ್‌ಎಸ್‌ಇ ಕಂಪನಿ ಕಾನೂನಿನ ಕೆಳಗೆ ನೊಂದಾಯಿತವಾಗಿದೆ.

ಕೇಂದ್ರ ಅಥವಾ ರಾಜ್ಯ ಸರ್ಕಾರದಿಂದ ಸ್ಥಾಪಿತವಾದ, ನಿರ್ವಹಿಸಲ್ಪಡುವ ಇಲ್ಲವೇ ಧನ ಸಹಾಯ ಪಡೆದ ಸಂಘಟನೆಗಳು ಮಾತ್ರ ಆರ್‌ಟಿಐಎ ಅಡಿಗೆ ಬರುತ್ತವೆ. ಷೇರು ವಿನಿಮಯ ಕೇಂದ್ರಗಳು ಈ ವ್ಯಾಖ್ಯಾನಕ್ಕೆ ಅನ್ವಯಿಸುವುದಿಲ್ಲ ಮತ್ತು ಎನ್‌ಎಸ್‌ಇಯ ನಿರ್ದೇಶಕರು ಸರ್ಕಾರದಿಂದ ನೇಮಿಸಲ್ಪಟ್ಟವರಲ್ಲ. ಈ ಹಿನ್ನೆಲೆಯಲ್ಲಿ ಕೇಂದ್ರ ಮಾಹಿತಿ ಆಯೋಗ ನೀಡಿದ ತೀರ್ಪನ್ನು ಅಮಾನ್ಯಗೊಳಿಸಬೇಕೆಂದು ಕೇಂದ್ರ ಷೇರು ವಿನಿಮಯ ಕೇಂದ್ರ ವಾದಿಸಿದೆ. (ಮೂಲ: ದಿ ಬಿಸಿನೆಸ್ ಲೈನ್)

# ಮಾಹಿತಿ ಸಂಗ್ರಹ ಅನಗತ್ಯ

ಮಾಹಿತಿ ಕಾಯ್ದೆ ಹಿನ್ನೆಲೆಯಲ್ಲಿ ಸಾರ್ವಜನಿಕ ಮಾಹಿತಿ ಅಧಿಕಾರಿಗಳಿಗೆ ಕೆಲವು ಸಮಸ್ಯೆಗಳು ಇವೆ. ಅರ್ಜಿದಾರ ಯಾವುದೋ ಮಾಹಿತಿ ಕೇಳುತ್ತಾನೆ. ಆ ಮಾಹಿತಿ ತಾನು ಕೇಳಿದ ಮಾದರಿಯಲ್ಲಿಯೇ ಇರಬೇಕೆಂದು ಬಯಸುತ್ತಾನೆ. ಸಾಧ್ಯವೇ? ಕೆಲವೊಮ್ಮೆ ಅಂತಹ ಮಾಹಿತಿ ಕೇಳಿದ ಮಾದರಿಯಲ್ಲಿ ಇಲ್ಲದಿರಬಹುದು. ಅಂದರೆ ಮಾಹಿತಿ ಅಧಿಕಾರಿ ಅದರ ಸಂಗ್ರಹಕ್ಕೆ ಸಮಯ, ಶ್ರಮ, ಅಲ್ಲದೆ ವೆಚ್ಚವನ್ನೂ ವಿನಿಯೋಗಿಸಬೇಕಾಗುತ್ತದೆ. ಅಷ್ಟಕ್ಕೂ ಮಾಹಿತಿ ಒಂದೆರಡು ಪುಟಗಳದ್ದಾದರೆ ಹೇಗಾದರೂ ಆತ ಸಂಗ್ರಹಿಸಿ ಒದಗಿಸಿಬಿಟ್ಟಾನು.ಆದರೆ ದೇಶದ ಉದ್ದಗಲಗಳಿಂದ ಸಂಗ್ರಹಿಸುವುದಾದರೆ ಬಹಳ ವೆಚ್ಚದಾಯಕ ಮತ್ತು ವರ್ಷಗಳ ಕಾಲವ್ಯಯವೂ ಆದೀತು.

ಕೇಂದ್ರ ಮಾಹಿತಿ ಆಯೋಗ ಕೂಡ ಈ ತೊಂದರೆಯನ್ನು ಗಮನಿಸಿದೆ. ಈ ಕಾರಣಕ್ಕಾಗಿಯೇ ಅದು ಸಾರ್ವಜನಿಕ ಮಾಹಿತಿ ಅಧಿಕಾರಿಯುಗಳು, ಅಂಕಿ ಅಂಶವನ್ನು ಸಂಗ್ರಹಿಸಿ ಕೊಡುವ ಅಗತ್ಯವಿಲ್ಲ' ಎಂದು ಪ್ರಕಟಿಸಿದೆ. ಅದರ ಪತ್ರ (216/ಐಸಿ/ಎ/2006 ದಿನಾಂಕ 31.8.2006)ದ ಮೂಲಕ ಸಿಐಸಿ ಅಭಿಪ್ರಾಯಪಟ್ಟಿರುವ ಪ್ರಕಾರ, ಎಲ್ಲ ಸಾರ್ವಜನಿಕ ಯೋಜನೆಗಳ ಉದ್ದೇಶ, ನಾಗರಿಕರಿಗೆ ಸುಲಭ ಲಭ್ಯ ಇರಬೇಕು. ಈ ಮೂಲಕ ಸಾರ್ವಜನಿಕ ಪ್ರಾಧಿಕಾರಗಳ ಪಾರದರ್ಶಕತೆ ಹೆಚ್ಚುತ್ತದೆ, ಭ್ರಷ್ಟಾಚಾರ ತಗ್ಗುತ್ತದೆ. ಹಾಗಾಗಿ ಸಾರ್ವಜನಿಕ ಮಾಹಿತಿ ಅಧಿಕಾರಿ ತಮ್ಮಲ್ಲಿರುವ ಮಾಹಿತಿಗಳನ್ನು ಜನರಿಗೆ ಒದಗಿಸಬೇಕು. ಕಾಯ್ದೆಯ ಸೆಕ್ಷನ್ 7(9)ರ ಅನ್ವಯ, ಅರ್ಜಿದಾರ ಕೇಳಿದ ಮಾದರಿಯಲ್ಲಿಯೇ ಮಾಹಿತಿ ಒದಗಿಸಬೇಕು. ಒಂದೊಮ್ಮೆ ಅರ್ಜಿದಾರ ಕೇಳಿದ ಮಾದರಿಯಲ್ಲಿ ಲಭ್ಯವಿಲ್ಲದಿದ್ದಲ್ಲಿ ಸಾರ್ವಜನಿಕ ಮಾಹಿತಿ ಅಧಿಕಾರಿ ಯಗಳು ಆ ರೂಪದಲ್ಲಿ ಮಾಹಿತಿ ಸಿದ್ಧಪಡಿಸಿ ಕೊಡುವ ಅಗತ್ಯವಿಲ್ಲ.ಇದರಿಂದ ಮಾಹಿತಿ ಆಂದೋಲನದಉದ್ದೇಶದಿಂದ ಹಿಂಸರಿದಂತೆ ಆಗುವುದಿಲ್ಲ.

ಲಭ್ಯವಿರುವಲ್ಲಿ ಸೂಚಿತ ಮಾದರಿಯಲ್ಲಿಯೇ ಮಾಹಿತಿ ಕೊಡಬೇಕು ಎನ್ನುವ ಮಾಹಿತಿ ಆಯೋಗ, ಸಿಕ್ಕ ದಾಖಲೆಗಳನ್ನು ತಪ್ಪು ಗುರಿಗಳಿಗೆ ಬಳಸುವ ಘಾತಕ ಶಕ್ತಿಗಳ ಬಗ್ಗೆ ಎಚ್ಚರಿಸಿದೆ. ಇದು ಮಾಹಿತಿ ಕಾಯ್ದೆಯ ಉದ್ದೇಶಕ್ಕೆ ಧಕ್ಕೆ ಎಂದೇ ಅಭಿಪ್ರಾಯಿಸಿದೆ.

## ಮಾಹಿತಿ ಕಾಯ್ದೆ 2005 –ನಮ್ಮ ಪ್ರಶ್ನೆ, ನಿಮ್ಮ ಅರಿವು




1. ಸಾರ್ವಜನಿಕ ಮಾಹಿತಿ ಅಧಿಕಾರಿ (ಪಿಐಒ) ಅಥವಾ ಇತರೆ ಅಧಿಕಾರಿಯ ವಿರುದ್ಧ ದಂಡ ವಿಧಿಸುವುದರ ಜೊತೆಗೆ ಮಾಹಿತಿ ಆಯೋಗ ಶಿಸ್ತು ಕ್ರಮಕ್ಕೂ ಸೂಚಿಸಬಹುದೇ?

2.ತನ್ನ ವಿಭಾಗಕ್ಕೆ ಹೊರತಾದ ಸಾರ್ವಜನಿಕ ಪ್ರಾಧಿಕಾರ ಕುರಿತ ಮಾಹಿತಿ ಅರ್ಜಿಯನ್ನು ಒಬ್ಬ ಪಿಐಒ ಸ್ವೀಕರಿಸಲು ನಿರಾಕರಿಸಬಹುದೇ?

3.ಸಾರ್ವಜನಿಕ ಮಾಹಿತಿ ಅಧಿಕಾರಿ ನಿರ್ದಿಷ್ಟ ನಮೂನೆ/ಮಾದರಿಯಲ್ಲಿ ಮಾಹಿತಿ ಒದಗಿಸಲು ಹೆಚ್ಚಿನ ಶುಲ್ಕ ಕೇಳಿದರೆ ಸಂಕಷ್ಟಕ್ಕೊಳಗಾದ ಅರ್ಜಿದಾರ ಮೊದಲ ಮೇಲ್ಮನವಿ ಅಧಿಕಾರಿಗೆ ಮನವಿ ಸಲ್ಲಿಸಬಹುದೇ?


4. ಮಾಹಿತಿ ನೀಡದ ಸಾರ್ವಜನಿಕ ಪ್ರಾಧಿಕಾರದ ವಿರುದ್ಧ ಕೊಟ್ಟ ತೀರ್ಪನ್ನೂ ಪಾಲಿಸದಿದ್ದರೆ ಮಾಹಿತಿ ಆಯೋಗ ದಂಡ ಹಾಕಬಹುದೇ?

5. ಆರ್‌ಟಿಐ ಕಾಯ್ದೆ 2005ರ ಪ್ರಕಾರ, ಮಾಹಿತಿ ಆಯೋಗಕ್ಕೆ ದೂರು ತೀರ್ಮಾನಿಸಲು ಸಮಯ ಮಿತಿ ಇದೆಯೇ?

(ಉತ್ತರ : 7ನೇ ಪುಟದಲ್ಲಿ)

## ಪಾರ್ಲಿಮೆಂಟ್ ಅಧಿವೇಶನ– ಒಂದು ಅಂಕಿಅಂಶ!

ಇದೀಗ ಮುಕ್ತಾಯ ಕಂಡ ಮುಂಗಾರು ಅಧಿವೇಶನದಲ್ಲಿ ಲೋಕಸಭೆ ಕೆಲಸ ಮಾಡಿದ್ದು ದಿನಕ್ಕೆ ಬರೀ ನಾಲ್ಕು ಘಂಟೆ. ವಾಸ್ತವವಾಗಿ ಅದು ದಿನಕ್ಕೆ ಆರು ಘಂಟೆ ಸರಾಸರಿಯಲ್ಲಿ ಕಾರ್ಯ ನಿರ್ವಹಿಸುವಂತೆ ವೇಳಾಪಟ್ಟಿ ಸಿದ್ಧಪಡಿಸಲಾಗಿತ್ತು. ರಾಜ್ಯಸಭೆ ದಿನಕ್ಕೆ ಐದು ತಾಸು ಕೆಲಸಕ್ಕೆಂದು ನಿಗದಿಯಾಗಿದ್ದರೆ ಅದು ಕಾರ್ಯಮಗ್ನವಾಗಿದ್ದು ದಿನಕ್ಕೆ ಮೂರೇ ಘಂಟೆಯಂತೆ! ಕಲಾಪ ಮುಂದೂಡಿಕೆಯಿಂದ ಲೋಕಸಭೆ ತನ್ನ ನಿಗದಿತ ಸಮಯದ ಶೇ. 40 ಭಾಗವನ್ನು ಕಳೆದುಕೊಂಡರೆ, ರಾಜ್ಯಸಭೆಯ ನಷ್ಟ ಶೇ.49. 2006ರಲ್ಲಿ ಲೋಕಸಭೆ 124 ಘಂಟೆಗಳ ಮುಂಗಾರು ಅಧಿವೇಶನ ನಡೆಸಿದ್ದರೆ, 2007ರ ಮುಂಗಾರು ಕಲಾಪ ಜರುಗಿದ್ದು ಕೇವಲ 65 ತಾಸು ಮಾತ್ರ.



ವೇಳಾಪಟ್ಟಿಗಿಂತ ಶೇ. 45ರಷ್ಟು ಕಡಿಮೆ ಅವಧಿ ಕೆಲಸ ಮಾಡಿದ್ದರಿಂದ ಪಾರ್ಲಿಮೆಂಟ್‌ನಲ್ಲಿ ಇತ್ಯರ್ಥ ವಾದ ವಿಚಾರಕ್ಕಿಂತ ಬಾಕಿ ಉಳಿದದ್ದೇ ಹೆಚ್ಚಾಗಿದ್ದುದು ಅಚ್ಚರಿಯಲ್ಲ. ಅಂಕಿಅಂಶಗಳ ಪ್ರಕಾರ, ಪಾರ್ಲಿಮೆಂಟ್ ಆರಂಭಕ್ಕೆ ಮುನ್ನ 71 ವಿಧೇಯಕಗಳು ಬಾಕಿಯಿದ್ದರೆ, ಅಧಿವೇಶನದ ನಂತರ ಬಾಕಿ ಉಳಿದದ್ದು 75. ಯೋಜನೆಯಂತೆ 25 ವಿಧೇಯಕಗಳು ಒಪ್ಪಿಗೆ ಪಡೆಯಬೇಕಿತ್ತು. ಅಷ್ಟೇ ಸಂಖ್ಯೆಯ ವಿಧೇಯಕಗಳನ್ನು ಮಂಡಿಸುವ ಉದ್ದೇಶವಿದ್ದಿತ್ತು. ಗಮನಿಸಬೇಕಾದುದೆಂದರೆ,ನಾಲ್ಕು ವಿಧೇಯಕಗಳು ಯಾವುದೇ ಚರ್ಚೆಯಿಲ್ಲದೆ ಲೋಕಸಭೆಯಲ್ಲಿ ಅನುಮೋದನೆ ಪಡೆದವು. ಈ ಎಲ್ಲ ನಷ್ಟಗಳು ಸಮರ್ಥನೀಯವಲ್ಲ ಎಂಬುದು ಪ್ರಾಜ್ಞರ ಅಭಿಮತ.

ಮಾಹಿತಿ ಹಕ್ಕು ಕಾಯ್ದೆ ಜಾರಿಗೆ ಬಂದು ಅದಾಗಲೇ ಎರಡು ವರ್ಷ ಸಂದಿದೆ.



ಇವತ್ತಿಗೂ ಸರ್ಕಾರಿ ವ್ಯವಸ್ಥೆಗಳು ಮಾಹಿತಿ ಅರ್ಜಿದಾರರ ಬೇಡಿಕೆಗಳನ್ನು ಸಮರ್ಪಕವಾಗಿ ಪೂರೈಸಲು ಅಸಮರ್ಥವಾಗಿವೆ. ಸರ್ಕಾರಿ ಇಲಾಖೆಗಳು ಮತ್ತು ಸಂಸ್ಥೆಗಳು ಆರ್‌ಟಿಐಎ ಜಾರಿಗೆ ನಾನಾ ತರದ ಬಿಕ್ಕಟ್ಟು ಎದುರಿಸುತ್ತಿವೆ ಎಂಬ ಅಂಶ ದೇಶದ ಎಲ್ಲೆಡೆಯಿಂದ ಸಿಗುವ ವರದಿಗಳಿಂದ ಸ್ಪಷ್ಟ. ಫಲಿತಾಂಶವೆಂದರೆ, ಕೇಂದ್ರ ಹಾಗೂ ರಾಜ್ಯ ಮಾಹಿತಿ ಆಯೋಗಗಳ ಎದುರು ದೂರು ಮೇಲ್ಮನವಿಗಳ ಮಹಾಪೂರ! ಆಯೋಗಗಳು ಆರ್‌ಟಿಐ ಕುರಿತ ನೀತಿ ಪ್ರಶ್ನೆಗಳ ಸಂಬಂಧ ಸ್ಪಷ್ಟತೆಗೆ ಕಾರ್ಯ ಪ್ರವೃತ್ತವಾಗಬೇಕೇ ವಿನಃ ದಿನದಿನದ ದೂರು ನಿರ್ವಹಣೆಗಲ್ಲ. ಇವು ಮೇಲ್ಮನವಿ ಪ್ರಾಧಿಕಾರದ ಹಂತದಲ್ಲಿ ವಿಚಾರಣೆಗೆ ಬರುವುದು ಸರಿಯಾದುದು.

ಸರ್ಕಾರಿ ಸಿಬ್ಬಂದಿಗಳಲ್ಲಿ ಮಾಹಿತಿ ಹಕ್ಕು ಕಾಯ್ದೆಯ ಬಗ್ಗೆ ಇರುವ ಅನಾದರ ಜಾರಿಗೆ ಇರುವ ಮುಖ್ಯ ತಡೆ. ತಾಲ್ಲೂಕು ಅಥವಾ ಉಪವಿಭಾಗೀಯ ಹಂತದ ನೌಕರರು ಅಧಿಕಾರಿಗಳನ್ನು ಬಿಡಿ, ಜಿಲ್ಲಾಧಿಕಾರಿಗಳ ಕಛೇರಿ ನೌಕರ ವರ್ಗದಲ್ಲೂ ಕಾಯ್ದೆ ಬಗ್ಗೆ ಅರಿವಿರುವವರು ಕೆಲವೇ ಮಂದಿ. ಕ್ರಿಯೇಟ್ ಸಂಸ್ಥೆ ಮಾಹಿತಿ ಕಾಯ್ದೆಯಡಿ ಕರ್ನಾಟಕದ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಸ್ವಯಂ ಘೋಷಿಸಬೇಕಾದ ಪ್ರಕಟನೆಗಳ ವಿವರ ಕೇಳಿತು. ಅದಕ್ಕೆ ಕಾಯ್ದೆಯ ಸೆಕ್ಷನ್ 4(1)(ಬಿ)ಯನ್ನು ಉಲ್ಲೇಖಿಸಿತ್ತು. 27 ಡಿಸಿ ಕಛೇರಿಗಳಿಂದ ಕೇಳಿದ ಮಾಹಿತಿಗೆ ಬಂದ ಉತ್ತರವೇ ಮೇಲಿನ ಮಾತುಗಳಿಗೆ ಸಾಕ್ಷಿ.

ಒಬ್ಬ ಪಿಐಒ, ಅರ್ಜಿ ನಿಗದಿತ ನಮೂನೆಯಲ್ಲಿಲ್ಲ ಎಂಬ ಕಾರಣ ಹೇಳಿ ಅರ್ಜಿಯನ್ನೇ ಮರಳಿಸಿದ. ಈಗ ಆರ್‌ಟಿಐಎ ಪ್ರಕಾರ ನಿಗದಿತ ನಮೂನೆಯ ಅರ್ಜಿಯ ಅಗತ್ಯವಿಲ್ಲ! ಇಬ್ಬರು ಪಿಐಒಗಳು ಮಾಹಿತಿಗೆ ಪ್ರತಿ ಪುಟಕ್ಕೆ ಐದು ರೂಪಾಯಿಗಳ ಶುಲ್ಕ ತುಂಬಲು ತಿಳಿಸಿದರು. ರಾಜ್ಯದ ಕಾನೂನಿನಂತೆ ಪುಟಕ್ಕೆ ಒಂದು ರೂಪಾಯಿ ದರ! ರಾಯಚೂರಿನ ಜಿಲ್ಲಾಧಿಕಾರಿ ಅರ್ಜಿದಾರರು ಅಗತ್ಯ ಶುಲ್ಕ 28 ರೂ.ಗಳನ್ನು ರಾಯಚೂರಿನಲ್ಲಿ ನಗದು ಪಾವತಿಸಲು ಸೂಚಿಸಿದರು. ನಾಲ್ಕು ಡಿಸಿಗಳು ಯಾವುದೇ ಹೆಚ್ಚಿನ ಶುಲ್ಕ ಕೇಳದೆ ದಾಖಲೆಯನ್ನು ಕಳುಹಿಸಿ ಕೊಟ್ಟಿದ್ದರು. ಬಹುಪಾಲು ಡಿಸಿಗಳು ತಮ್ಮ ಕಛೇರಿಗಳ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಮತ್ತು ಮೇಲ್ಮನವಿ ಪ್ರಾಧಿಕಾರಗಳ ವಿವರವನ್ನು ಒಂದು ಪುಟದಲ್ಲಿ ಮುದ್ರಿಸಿ ಕಳಿಸಿಕೊಟ್ಟಿದ್ದವು. ವಾಸ್ತವವಾಗಿ ಕ್ರಿಯೇಟ್ ಕೇಳಿದ್ದು ಈ ಮಾಹಿತಿಯಾಗಿರಲಿಲ್ಲ. ಹೋಗಲಿ ಬಿಡಿ ಎಂದರೆ, ಬೆಂಗಳೂರಿನ ನಗರ ಜಿಲ್ಲಾಧಿಕಾರಿಗೆ ಕಾಯ್ದೆ ತಿಳಿಸಿದ 30 ದಿನಗಳಲ್ಲಿ ಉತ್ತರಿಸಲೂ ಸಮಯ ವಿದ್ದಿರಲಿಲ್ಲ!

ಈ ಅಜ್ಞಾನಕ್ಕೂ ಕಾರಣಗಳಿವೆ. ಮಾಹಿತಿ ಅರ್ಜಿಗಳಿಗೆ ಸಂಬಂಧಿಸಿದಂತೆ ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತಂತೆ ಯಾವುದೇ ಮಾರ್ಗದರ್ಶಿ, ಮಾದರಿ, ಇಲಾಖಾ ಕೈಪಿಡಿ ಲಭ್ಯವಿಲ್ಲ. ಅಧಿಕಾರಿಗಳಲ್ಲಿ ಮಾಹಿತಿ ಕಾಯ್ದೆಯ ಬಗ್ಗೆ ಅಷ್ಟಿಷ್ಟು ಅರಿವಿದೆಯಾದರೂ ಅರ್ಜಿಗಳನ್ನು ವ್ಯವಹರಿಸುವ ಪಕ್ಕಾ ಕ್ರಮ ಗೊತ್ತಿಲ್ಲ. ಈ ಕ್ಷೇತ್ರದಲ್ಲಿ ನಮ್ಮ ಅಧಿಕಾರಿಗಳು ಇಂಗ್ಲೆಂಡ್ ಮತ್ತು ಬಲ್ಗೇರಿಯಾ ದೇಶಗಳಿಂದ ಕಲಿಯುವುದು ಬಹಳವಿದೆ. ಮುಖ್ಯವಾಗಿ, ಮಾಹಿತಿ ಆಯೋಗವೇ ಇಂತಹ ಮಾಹಿತಿ ಪುಸ್ತಕಗಳನ್ನು ಪ್ರಕಟಿಸಬೇಕು.

ವಿವಿಧ ಸರ್ಕಾರಿ ತರಬೇತಿ ವ್ಯವಸ್ಥೆಗಳ ತರಬೇತಿ ಕ್ರಮವೇ ಅಸಮರ್ಪಕ. ಕಳೆದ ಎರಡು ವರ್ಷಗಳಲ್ಲಿ ಮಾಹಿತಿ ಆಯೋಗಗಳು ಹಲವು ಸೂಚನೆ ಮತ್ತು ತೀರ್ಪು ನೀಡಿವೆ ಅವುಗಳಲ್ಲಿ ಕೆಲವಂತೂ ಐತಿಹಾಸಿಕ ಮಹತ್ವದ್ದು. ಆದರೆ ಇವಾವುವೂ ಸರ್ಕಾರಿ ತರಬೇತಿಯ ಪರಿಕರದಲ್ಲಿ ಸೇರಿಲ್ಲ! ಬಹುಷಃ ಒಂದು ಕೈಪಿಡಿಯ ಮೂಲಕ ಮಾಹಿತಿ ಕಾಯ್ದೆಯ ಸದುದ್ದೇಶಗಳನ್ನು ಅರ್ಥೈಸಿಕೊಳ್ಳಬಹುದು. ನಾಗರಿಕ ಸಂಘಟನೆಗಳನ್ನು ತರಬೇತಿ ಯೋಜನೆಯಲ್ಲಿ ಸೇರಿಸಿ ಕೊಳ್ಳುವುದರಿಂದಲೂ ತರಬೇತಿ ಗುಣಮಟ್ಟ ಹೆಚ್ಚಿಸಬಹುದು. ಉದಾಹರಣೆಗೆ, ಕ್ರಿಯೇಟ್ ಮತ್ತು ದೆಹಲಿಯ ಕಾಮನ್‌ವೆಲ್ತ್ ಹ್ಯೂಮನ್ ರೈಟ್ಸ್ ಇನಿಷಿಯೇಟಿವ್ (ಸಿಹೆಚ್‌ಆರ್‌ಐ) ಕರ್ನಾಟಕದ ಹಲವು ಇಲಾಖೆಗಳ ತರಬೇತುದಾರರಾಗಿ ಪಾಲ್ಗೊಂಡಿದ್ದನ್ನು ಇಲ್ಲಿ ಸ್ಮರಿಸಬಹುದು.ಸಾರ್ವಜನಿಕ ಪ್ರಾಧಿಕಾರಗಳು ದಾಖಲೆಗಳನ್ನು ಕಾದಿಡುವ ಮತ್ತು ನಿರ್ವಹಿಸುವ ಪದ್ಧತಿಗಳ ಮೇಲೆ ಮಾಹಿತಿ ಹಕ್ಕಿನ ಯಶಸ್ಸು ನಿಂತಿದೆ. ದುರಂತವೆಂದರೆ, ದಾಖಲೆಗಳ ಬಗ್ಗೆ ವೈಜ್ಞಾನಿಕ ನಿರ್ವಹಣೆ ಕುರಿತು ಸರ್ಕಾರ ಕೂಡ ಗಮನ ಹರಿಸಿಲ್ಲ. ಅಷ್ಟೇಕೆ, ಮಾಹಿತಿ ಹಕ್ಕು ಕಾಯ್ದೆಯತ್ತ ಆದ್ಯತೆ ನೀಡಲು ವಿಫಲವಾಗಿದೆ. ಸಾರ್ವಜನಿಕ ದಾಖಲೆ ಕಾಯ್ದೆ –ಪಬ್ಲಿಕ್ ರಿಕಾರ್ಡ್ಸ್ ಆ್ಯಕ್ಟ್ ಈಗ ಮರೆತ ಮಾತು. ದಾಖಲೆ ಪುನರುಜ್ಜೀವನದತ್ತಲೂ ಗಮನವಿಲ್ಲ. ಇದರಿಂದಾ



ಗಿಯೇ ಮಾಹಿತಿ ಅಧಿಕಾರಿಗಳಿಗೆ ಅರ್ಜಿದಾರರು ಕೇಳಿದ ಮಾಹಿತಿ ಕೊಡಲು ಇನ್ನಿಲ್ಲದ ತೊಂದರೆಗಳಾಗುತ್ತಿವೆ. ಈ ಹಿನ್ನೆಲೆಯಲ್ಲಿ ಇತ್ತೀಚೆಗೆ ಕರ್ನಾಟಕ ಮಾಹಿತಿ ಆಯೋಗ ರಾಜ್ಯ ಸರ್ಕಾರಕ್ಕೆ ದಾಖಲೆ ನಿರ್ವಹಣೆಗೆ ನಿರ್ದಿಷ್ಟ ಮಾರ್ಗದರ್ಶಿ ಸೂತ್ರ ಅಳವಡಿಸಿಕೊಳ್ಳಲು ಸೂಚಿಸಿರುವುದು ಸ್ವಾಗತಾರ್ಹ ಬೆಳವಣಿಗೆ.


ಸ್ವಾರಸ್ಯಕರ ಅಂಶವೆಂದರೆ, ನಾಗರಿಕರು ಕೇಳುವ ಬಹುಪಾಲು ಮಾಹಿತಿಗಳು ಸರಳವಾದುದು. ನಿರಾಯಾಸವಾಗಿ ಸರ್ಕಾರಿ ಪ್ರಾಧಿಕಾರಗಳು ಸ್ವಯಂ ಘೋಷಿಸಬಹುದಾದಂತವು. ಅವಿನ್ನೂ ಮಾಹಿತಿ ಕಾಯ್ದೆಯಲ್ಲಿ ಹೇಳಿದ ಮಾರ್ಗದರ್ಶಿ ವಿಧಗಳನ್ನೇ ತಯಾರಿಸಿಲ್ಲ. ಕೆಲವು ಸಾರ್ವಜನಿಕ ಪ್ರಾಧಿಕಾರಗಳು ತಮ್ಮ ವೆಬ್‌ಸೈಟ್‌ನಲ್ಲೂ ಮಾಹಿತಿ ಹಾಕಿಲ್ಲ. ದೊಡ್ಡ ಸಂಖ್ಯೆಯ ಪ್ರಾಧಿಕಾರಗಳು ಈ ಮಾರ್ಗದರ್ಶಿ ಚೌಕಟ್ಟು ರೂಪಿಸಲು ಅಗತ್ಯ ಪರಿಣತಿಯನ್ನೇ ಪಡೆದಿಲ್ಲ! ಈ ಸಮಸ್ಯೆ ನಿವಾರಣೆಗೆ ಮಾಹಿತಿ ಆಂದೋಲನದಲ್ಲಿ ಸಕ್ರಿಯವಾಗಿರುವ ನಾಗರಿಕ ಸಂಘಟನೆಗಳು

ಪ್ರಮುಖ ಪಾತ್ರ ವಹಿಸಬಹುದು.

ಆರ್‌ಟಿಐ ಬೆಳೆಯುತ್ತಿರುವ ವಿಚಾರ. ಮಾಹಿತಿ ಆಯೋಗಗಳ ಹೊಸ ತೀರ್ಮಾನಗಳು ಮತ್ತು ನ್ಯಾಯಾಂಗದ ತೀರ್ಪುಗಳು ಅಧಿಕಾರಿಗಳಿಗೆ ತಿಳಿಸುತ್ತಿರುವಂತಹ ಕ್ರಮ ಅನಿವಾರ್ಯ. ಸದ್ಯಕ್ಕಂತೂ ನಿರಂತರವಾಗಿ ಮಾಹಿತಿ ಶಿಕ್ಷಣ ಕೊಡುವಂತಹ ಪದ್ಧತಿ ಇಲ್ಲ. ಪಿಐಒಗಳಿಗೆ ನಿಯಮಿತವಾಗಿ ತರಬೇತಿ ಕೊಡುವುದು, ಅವರ ಅರಿವನ್ನು ನವೀಕರಿಸುತ್ತಿರುವ ಕೆಲಸ ಆಗಲೇಬೇಕು. ಈ ಸಾರ್ವಜನಿಕ ಪ್ರಾಧಿಕಾರಗಳ ಗುಂಪು ಚರ್ಚೆಗಳು ನಡೆಯುವಂತಾಗಬೇಕು. ಪ್ರಮುಖ ತೀರ್ಪು, ಆದೇಶಗಳ ಲಿಖಿತ ಪ್ರತಿಯನ್ನು ಪಿಐಒಗಳಿಗೆ ಮುಟ್ಟಿಸು ವುದರಿಂದಲೂ ಸ್ವಲ್ಪ ಮಟ್ಟಿನ ಫಲಿತಾಂಶ ಸಾಧ್ಯ. ಮಾಹಿತಿ ಹಕ್ಕು ಕಾಯ್ದೆ ಬಗ್ಗೆ ವಾರ್ತಾಪತ್ರ, ಕರಪತ್ರಗಳನ್ನು ಹೊರಡಿಸುವುದೂ ಅನುಕೂಲಕರ ಕ್ರಮವಾದೀತು. ಇದಕ್ಕೆ ಸೆಂಟರ್ ಫಾರ್ ಗುಡ್ ಗೌವೆರ್ನನ್ಸ್ ಪ್ರಕಾಶಿಸುವ ಆರ್‌ಟಿಐ ಟ್ರೈವ್ಸ್‌ನ್ನು ಉದಾಹರಿಸಬಹುದು. ಕ್ರಿಯೇಟ್ ಇನ್ಫೋ ಟ್ಯಾಪ್ (ಪಾರದರ್ಶಕತೆ, ಜವಾಬ್ದಾರಿತನ ಮತ್ತು ಪ್ರಾತಿನಿಧ್ಯತೆ ಕುರಿತ ಮಾಹಿತಿ) ಎಂಬ ತ್ರೈ ಮಾಸಿಕ ವಾರ್ತಾಪತ್ರವನ್ನು ಪ್ರಕಟಿಸುತ್ತಿದೆ. ಟ್ರಾನ್ಸ್‌ಪರೆನ್ಸಿ ರಿವ್ಯೂ ಪತ್ರಿಕೆಯನ್ನು ಸೆಂಟರ್ ಫಾರ್ ಮೀಡಿಯಾ ಸ್ಟಡೀಸ್ ಹೊರಡಿಸುತ್ತಿದೆ.

ಇವೆಲ್ಲ ಏನೇ ಇರಲಿ, ಸರ್ಕಾರ ಮಾಹಿತಿ ಹಕ್ಕು ಕಾಯ್ದೆಗೆ ಪೂರಕವಾಗಿ ಇದ್ದಿರಬೇಕು. ಆರ್‌ಟಿಐಎಯ ಸೆಕ್ಷನ್ 26 ಹೇಳುವುದೂ ಇದನ್ನೇ.

## ಅರಿವಿನ ಹಕ್ಕು ದಿನ–ಏನಿದು?



ಮಾಹಿತಿ ಹಕ್ಕಿನ ಹಿನ್ನೆಲೆಯಲ್ಲಿ ಜಾರಿಗೆ ಬಂದ ಅರ್ಥಪೂರ್ಣ ಆಚರಣೆಯೇ ಅರಿವಿನ ಹಕ್ಕು ದಿನ. 2002ರಿಂದ ಪ್ರತಿ ವರ್ಷದ ಸೆಪ್ಟೆಂಬರ್ 28ರಂದು ಅರಿವಿನ ಹಕ್ಕು ದಿನವೆಂದು ಆಚರಿಸಲಾಗುತ್ತದೆ. ಬಲ್ಗೇರಿಯಾದ ಸೋಫಿ ಯಾದಲ್ಲಿ ಮಾಹಿತಿ ಹಕ್ಕಿನ ಕ್ಷೇತ್ರದಲ್ಲಿ ತೊಡಗಿಸಿ ಕೊಂಡಿರುವ ಸಂಘಟನೆಗಳು ಸಮಾವೇಶ ನಡೆಸಿದ್ದವು. ಆಗ ಮಾಹಿತಿ ಸ್ವಾತಂತ್ರ್ಯದ ವಕ್ತಾರರು ಎನ್ನುವ ಎಫ್‌ಓಐಎ (FOIA) ನೆಟ್‌ವರ್ಕ್ ರಚಿಸಲಾಯಿತು. ಪಾರದರ್ಶಕ ಸರ್ಕಾರ, ಪ್ರತಿಯೊಬ್ಬನಿಗೂ ಮಾಹಿತಿ ಸ್ವಾತಂತ್ರ್ಯ ಎಫ್‌ಓಐಎಯ ಮೂಲ ಮಂತ್ರ ಎಂದು ಒಪ್ಪಲಾಯಿತು.

ಎಫ್‌ಓಐಎ ಪ್ರತಿ ಸೆಪ್ಟೆಂಬರ್ 28ರಂದು ಮಾಹಿತಿ ಹಕ್ಕು ಉತ್ತೇಜಿಸುವ ಆಂದೋಲನದ ಸ್ಮರಣಾರ್ಥ ವಿಶ್ವಾದ್ಯಂತ ದಿನಾಚರಣೆ ಆಚರಿಸಲು ನಿರ್ಧರಿಸಿತು. (ಆದರೆ ಅಮೆರಿಕದಲ್ಲಿ 1981ರಿಂದಲೇ ಮಾರ್ಚ್ 16ರಂದು ಮಾಹಿತಿ ಹಕ್ಕಿನ ದಿನವನ್ನು ಆಚರಿಸಲಾಗುತ್ತದೆ). ಹಾಗಾಗಿ ಸೆಪ್ಟೆಂಬರ್ 28 ಅರಿವಿನ ಹಕ್ಕು ದಿನವಾಯಿತು. ಇಂದು 80 ದೇಶಗಳು ಮಾಹಿತಿ ಪಡೆಯುವ ಕಾಯ್ದೆಯನ್ನು ಅಳವಡಿಸಲು ಹೆಜ್ಜೆ ಇರಿಸಿವೆ.

## ಅರಿವಿನ ಹಕ್ಕು ದಿನ ಯಾಕೆ?

ಸಾರ್ವಜನಿಕರಲ್ಲಿ ಮಾಹಿತಿ ಹಕ್ಕಿನ ಬಗ್ಗೆ ಜಾಗೃತಿ ಮೂಡಿಸುವ ಅಗತ್ಯತೆಯಿಂದಲೇ ಅರಿವಿನ ದಿನಾಚರಣೆ ನಡೆಯುತ್ತಿದೆ. ಈ ದಿನ ಮಾಹಿತಿ ಸ್ವಾತಂತ್ರ್ಯಕ್ಕೆ ಹೋರಾಡುತ್ತಿರುವ ಸಂಘಟನೆಗಳು ಮೂಲಭೂತ ಮಾನವ ಹಕ್ಕುಗಳ ಪ್ರಚಾರಕ್ಕೆ, ಸರ್ಕಾರದಲ್ಲಿ ಗ್ರಾಹಕ ಪ್ರಾತಿನಿಧ್ಯಕ್ಕೆ, ನಾಗರಿಕರ ಹಕ್ಕುಗಳಿಗಾಗಿ ಆಂದೋಲನಗಳನ್ನು ಹಮ್ಮಿಕೊಳ್ಳುತ್ತವೆ. ಮಾಹಿತಿ ಹಕ್ಕಿನ ಕಾಯ್ದೆಯನ್ನು ಅಳವಡಿಸಿಕೊಳ್ಳಲು ಒತ್ತಾಯಿಸಿ ಸರ್ಕಾರೇತರ ಸಂಘಟನೆಗಳು ಹೋರಾಡುತ್ತಿವೆ.

ಅರಿವಿನ ಹಕ್ಕು ದಿನದಂದು ದೇಶದ ನಾಗರಿಕ ಸಂಘಟನೆಗಳು ಹತ್ತು ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬಹುದು. ಅಂತಹ ಕೆಲವು ಹೆಜ್ಜೆಗಳು ಕೆಳಗಿನಂತಿವೆ.

* ಮಾಹಿತಿ ಹಕ್ಕಿನ ಬಗ್ಗೆ ಜಾಗೃತಿ ಮೂಡಿಸಲು ದೇಶಾದ್ಯಂತ ಮಾಧ್ಯಮ ಆಂದೋಲನವನ್ನು ಹಮ್ಮಿಕೊಳ್ಳುವುದು.
* ದೇಶ ಅಥವಾ ರಾಜ್ಯದಲ್ಲಿ ಮಾಹಿತಿ ಹಕ್ಕಿನ ಬಳಕೆಯ ವರದಿಯನ್ನು ಪ್ರಕಟಿಸುವುದು.
* ಮಾಹಿತಿ ಕಾಯ್ದೆ ಇಲ್ಲದ ದೇಶಗಳಲ್ಲಿ ಇದರ ಜಾರಿಗೆ ಒತ್ತಾಯಿಸುವುದು.
* ಕಾಯ್ದೆ ಜಾರಿಯಲ್ಲಿರುವ ದೇಶಗಳಲ್ಲಿ ಅದರ ವಿಸ್ತೃತ ಅರಿವಿಗೆ, ಅಳವಡಿಕೆಗೆ ಪೂರಕ ಕೆಲಸ ಮಾಡುವುದು.
* ಸರ್ಕಾರದ ಕೈಯಲ್ಲಿರುವ ಮಾಹಿತಿಗಳನ್ನು ಪಡೆಯುವ ವಿಧಾನಗಳನ್ನು ಸ್ಥಳೀಯ ನಾಗರಿಕ ಸಂಘಟನೆಗಳಿಗೆ ಸಮಾವೇಶಗಳನ್ನು ಏರ್ಪಡಿಸಿ ವಿವರಿಸುವುದು.
* ಮುಕ್ತ ಸರ್ಕಾರ ಮತ್ತು ನಾಗರಿಕ ಪ್ರಾತಿನಿಧ್ಯದ ವಿಚಾರ ವಾಗಿ ಸಭೆ ಅಥವಾ ಟಿ.ವಿ.ಯಲಿ ಪ್ರಸಾರವಾಗುವ ಚರ್ಚೆಯನ್ನು ನಡೆಸುವುದು.

### ಮಾಹಿತಿ ಅಧಿಕಾರಿಗಳನ್ನು ನೇಮಿಸುವಂತೆ ಪಾಟ್ನಾ ಹೈಕೋರ್ಟ್ ನಿರ್ದೇಶನ

ಸಾರ್ವಜನಿಕ ಮಾಹಿತಿ ಅಧಿಕಾರಿಗಳನ್ನು ನೇಮಿಸುವಂತೆ ಪಾಟ್ನಾ ಹೈಕೋರ್ಟ್ ಬಿಹಾರ ರಾಜ್ಯ ಸರ್ಕಾರಕ್ಕೆ ನಿರ್ದೇಶನವಿತ್ತಿದೆ. 2005ರ ಮಾಹಿತಿ ಹಕ್ಕು ಕಾನೂನು ಅನ್ವಯ ಮಾಹಿತಿ ಅಧಿಕಾರಿಗಳನ್ನು ನೇಮಿಸಬೇಕಿದ್ದರೂ ಸರ್ಕಾರ ವಿಳಂಬ ಮಾಡಿತ್ತು. ಮುಖ್ಯ ನ್ಯಾಯಾಧೀಶ ಡಾ. ಜೆ.ಎನ್.ಭಟ್ ಹಾಗೂ ನ್ಯಾಯಾಧೀಶ ಶೈಲೇಶ್ ಕುಮಾರ್ ಸಿನ್ಹಾರನ್ನೊಳಗೊಂಡ ಹೈಕೋರ್ಟ್‌ನ ವಿಭಾಗೀಯ ಪೀಠ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆಯ ವೇಳೆ ಈ ನಿರ್ದೇಶನವಿತ್ತಿದೆ.

(ಮೂಲ:www.indialawnews.com )

# ಉತ್ತಮ ಆಡಳಿತದ – ನವರತ್ನಗಳು

ಇದೊಂದು ಹೊಸ ಕ್ರಾಂತಿ. ಒಂದರ್ಥದಲ್ಲಿ, ದೇಶದಲ್ಲಿ ಪ್ರಜಾಪ್ರಭುತ್ವದ 'ಮೂರನೇ ಅಲೆ'ಯೇ ಇದು ಎನ್ನಬಹುದು. ವಾಸ್ತವವಾಗಿ, ಈ ಕಾಯ್ದೆ ದಕ್ಷ ಆಡಳಿತದ ಆಸೆ ಹೊತ್ತವರ ಕೈಯಲ್ಲಿ ದೊಡ್ಡ ಅಸ್ತ್ರವಾಗಬಲ್ಲದು. ಅಂತಹ ಸಾಧ್ಯತೆಗೆ ಒಂಭತ್ತು ಹೆಜ್ಜೆಗಳನ್ನು ಆದ್ಯತೆಯಿಂದ ಪಾಲಿಸಬೇಕು.

1. ಸಾರ್ವಜನಿಕ ಮಾಹಿತಿ ಅಧಿಕಾರಿಗಳ ನೇಮಕವಾಗಬೇಕು. ಈ ಅಧಿಕಾರಿಗಳಿಗೆ ಕಾಯ್ದೆಯ ಎಲ್ಲ ಅಂಶಗಳೂ ಪರಿಚಿತವಾಗಿರಬೇಕು. ಈಗ ಕಾಯ್ದೆಯನ್ವಯ, ದಂಡಗಳಿಗೆ ಪಿಐಎಲ್‌ಓಗಳನ್ನು ಜವಾಬ್ದಾರರನ್ನಾಗಿಸಲಾಗಿದೆ. ಇದರ ಬದಲು, ಕಛೇರಿಯ ಮುಖ್ಯಾಧಿಕಾರಿಯನ್ನು ಜವಾಬ್ದಾರ ಗೊಳಿಸಿದರೆ ಪರಿಣಾಮಕಾರಿ.
2. ದಾಖಲೆಗಳ ನಿರ್ವಹಣಾ ಕ್ರಮ ವೈಜ್ಞಾನಿಕಗೊಳ್ಳಬೇಕು. ಮಾಹಿತಿ ಲಭ್ಯವಾಗಬೇಕು. ಜಿಲ್ಲಾ ಮಟ್ಟದಲ್ಲೂ ಜನರಿಗೆ ಸಿಗುವಂತಿರಬೇಕು. ಇದನ್ನು ರಾಷ್ಟ್ರೀಯ ಮಟ್ಟದಲ್ಲಿ ತಂತ್ರಜ್ಞಾನದ ಸಹಾಯದಿಂದ ಆನ್‌ಲೈನ್‌ನಲ್ಲಿ ದೊರಕುವಂತೆ ಮಾಡಿದರೆ ಇದೂ ಸಾಧ್ಯ.
3. ಇಲಾಖೆ, ಪ್ರಾಧಿಕಾರ, ಸೇವೆಗಳ ಹಲವು ಹಂತಗಳ ಅಧಿಕಾರಿಗಳು ಸ್ವಯಂ ಘೋಷಿಸಬೇಕಾದ ಪ್ರಕಟನೆಗಳು ಸಾರ್ವಜನಿಕರಿಗೆ ಬಹಿರಂಗ ಪಡಿಸುವ ವಿಧಾನ ರೂಪಿಸಬೇಕು. ಇದರಿಂದ ನಾಗರಿಕರು ಪ್ರತಿಯೊಂದಕ್ಕೂ ಅರ್ಜಿ ಸಲ್ಲಿಸುವ, ಸಮಯ ವ್ಯಯಿಸುವ ಕಷ್ಟ ತಪ್ಪುತ್ತದೆ.
4. ಮಾಹಿತಿ ಕಾಯ್ದೆಯ ಸಮರ್ಪಕ ಜಾರಿಯಲ್ಲಿ ಮಾಹಿತಿ ಆಯೋಗದ ಜವಾಬ್ದಾರಿ ದೊಡ್ಡದು. ಇದು ಪ್ರಭಾವಿಯಾಗಿ, ಪಾರದರ್ಶಕವಾಗಿ ಕೆಲಸ ಮಾಡಬೇಕಾದ ಅಗತ್ಯವಿದೆ. ಕೆಲವೊಮ್ಮೆ ಮಾಧ್ಯಮ ವರದಿಗಳನ್ನು ಗಮನಿಸಿಯೂ ಕ್ರಮ ಕೈಗೊಳ್ಳುವಂತಿರಬೇಕು. ಈ ಕ್ರಮವನ್ನು ಮಾನವ ಹಕ್ಕು ಆಯೊಗ ಮತ್ತು ಸುಪ್ರೀಂಕೋರ್ಟ್ ಈಗಾಗಲೇ ಅನುಸರಿಸುವುದನ್ನು ಕಾಣಬಹುದು. ಹಾಗೆಯೇ ದಂಡ ವಿಧಿಸಲು ಅವಕಾಶವಿರುವ ಸೆಕ್ಷನ್ 20ನ್ನು ಸಾರ್ವಜನಿಕ ಮಾಹಿತಿ ಅಧಿಕಾರಿಯನ್ನು ನೇಮಿಸದಿರುವುದಕ್ಕೆ, ವಾರ್ಷಿಕ ವರದಿ ಮಂಡಿಸದಿರುವುದು ಮುಂತಾದುವಕ್ಕೂ ಅನ್ವಯಿಸುವಂತಾಗಬೇಕು.
5. ನಾಗರಿಕ ಸಂಘಟನೆಗಳು ಕಾಯ್ದೆಯ ಕುರಿತು ಕಣ್ಣಾವಲು ನಡೆಸುತ್ತಿರಬೇಕು. ಜನರನ್ನು, ಸಂಬಂಧಿಸಿದ ಮಾಹಿತಿದಾರರನ್ನು ಅತ್ತ ಜಾಗೃತಗೊಳಿಸುವ ಕಾರ್ಯಕ್ರಮ ಹಮ್ಮಿಕೊಳ್ಳಬೇಕು. ವಾಸ್ತವವಾಗಿ, ನಾಗರಿಕರು ಮಾಹಿತಿ ಆಯೋಗದಲ್ಲೂ ಸದಸ್ಯರನ್ನಾಗಿಸುವ ಅಗತ್ಯವಿದೆ.
6. ಸುದ್ದಿ ಮಾಧ್ಯಮಗಳು ಮಾಹಿತಿ ಕಾಯ್ದೆ ಮತ್ತು ಅದರ ಜಾರಿಗೆ ಸಂಬಂಧಿಸಿದಂತೆ ಹೆಚ್ಚು ಸ್ಥಳ, ಸಮಯ ಮೀಸಲಿಡಬೇಕಾದ ಅಗತ್ಯವಿದೆ. ಸಮಾಜದಲ್ಲಿ ತನ್ನ ಅಗತ್ಯವನ್ನು ಪ್ರಸ್ತುತಪಡಿಸಲು ಮಾಧ್ಯಮಗಳಿಗೆ ಇದು ಅತಿ ದೊಡ್ಡ ಅವಕಾಶವೂ ಹೌದು. ಸಂಸ್ಥೆಯಾಗಿ, ವೈಯುಕ್ತಿಕವಾಗಿ ಪತ್ರಕರ್ತರಿಗೆ ಮಾಹಿತಿ ಕಾಯ್ದೆಯ ಅರಿವು ಲಾಭವೇ ಸರಿ.
7. ಕಾಯ್ದೆಯ ಹಿನ್ನೆಲೆಯಲ್ಲಿ ಕಾಲಕಾಲಕ್ಕೆ ಭ್ರಷ್ಟಾಚಾರದ ಮಟ್ಟ, ಸರ್ಕಾರದ ನಿಲುವು–ನೀತಿಗಳನ್ನು ಸ್ವತಂತ್ರ ಪರಿಶೋಧಕರು, ಪ್ರಾಜ್ಞರು ಪರಿಶೀಲಿಸುವ ವ್ಯವಸ್ಥೆ ಇರಬೇಕು.
8. ಪ್ರಸ್ತುತ ಕಾಯ್ದೆಯಲ್ಲಿರುವ ಕೆಲವು ಅಸ್ಪಷ್ಟತೆಗಳನ್ನು ಸರಿಪಡಿಸುವ ಅನಿವಾರ್ಯತೆಯಿದೆ.
9. ರಾಜ್ಯ ಮಾಹಿತಿ ಆಯೋಗದ ಎಲ್ಲ ಖರ್ಚುಗಳನ್ನು ಕೇಂದ್ರ ಸರ್ಕಾರ ನಿರ್ವಹಿಸಬೇಕು. ಈಗ ಅದು ತರಬೇತಿಗೆ ಹಣವನ್ನು ಭರಿಸುತ್ತದೆ. ಆದರೆ ಅಷ್ಟೂ ವೆಚ್ಚವನ್ನು ಕೇಂದ್ರ ವಹಿಸಿಕೊಂಡಾಗ ರಾಜ್ಯ ಸರ್ಕಾರದ ವ್ಯವಸ್ಥೆಗಳ ಮರ್ಜಿಗೆ ರಾಜ್ಯ ಆಯೊಗ ಬೀಳುವುದಿಲ್ಲ. ಸಮರ್ಪಕ ಕೆಲಸ ಸಾಧ್ಯ.

(ಡಾ. ಎನ್.ಭಾಸ್ಕರರಾವ್, ಮುಖ್ಯಸ್ಥರು, ಸಿಎಂಎಸ್, ನವದೆಹಲಿ ಇವರ ಲೇಖನ

## ಮಾಹಿತಿ ಕಾಯ್ದೆ 2005 – ನಮ್ಮ ಪ್ರಶ್ನೆ, ನಿಮ್ಮ ಅರಿವು ಉತ್ತರಗಳು

1. ನಿಜ. ಅರ್ಜಿ ಸ್ವೀಕರಿಸಲು ನಿರಾಕರಿಸಿದ, ಸೂಚಿತ ಸಮಯ ಮಿತಿಯಲ್ಲಿ ಮಾಹಿತಿ ಒದಗಿಸದ ಪಿಐಒ ವಿರುದ್ಧ ಮಾಹಿತಿ ಆಯೋಗ ಶಿಸ್ತು ಕ್ರಮಕ್ಕೆ ಆದೇಶಿಸಬಹುದು. ದುರುದ್ದೇಶದ ನಿರಾಕರಣೆ, ಉದ್ದೇಶಪೂರ್ವಕವಾಗಿ ಸರಿಯಿಲ್ಲದ, ಅಪೂರ್ಣ,ತಪ್ಪು ಮಾರ್ಗಕ್ಕೆಳೆಸುವ ಮಾಹಿತಿ ನೀಡುವುದು, ಕೇಳಿದ ಮಾಹಿತಿಯನ್ನುನಾಶಗೊಳಿಸುವುದು ಅಥವಾ ಮಾಹಿತಿ ಒದಗಿಸುವ ಪ್ರಕ್ರಿಯೆಯಲ್ಲಿ ಯಾವುದೇ ತಡೆ ಒಡ್ಡುವುದು ಕಾನೂನುಬಾಹಿರ.

2. ಇಲ್ಲ. ಬೇರೆ ಸಾರ್ವಜನಿಕ ಪ್ರಾಧಿಕಾರದ ಕುರಿತ ಅರ್ಜಿಯಾದರೂ ಪಿಐಒ ಅರ್ಜಿ ಸ್ವೀಕಾರ ಮಾಡಲೇಬೇಕು. ಅರ್ಜಿ ಪಡೆದ ಅವರು ಐದು ದಿನಗಳೊಳಗೆ ಸಂಬಂಧಿತರಿಗೆ ಮುಟ್ಟಿಸಬೇಕು. ಆನಂತರವೇ ಮಾಹಿತಿ ನೀಡುವ 30 ದಿನದ ಗಡುವು ಆರಂಭಗೊಳ್ಳುತ್ತದೆ. ಅರ್ಜಿದಾರನಿಗೆ ಈ ಮಾಹಿತಿಯನ್ನೂ ಆತ ಪೂರೈಸಬೇಕು.

3. ಹೌದು. ಕಾಯ್ದೆಯ ಉಲ್ಲಂಘನೆಯಾಗಿದ್ದಲ್ಲಿ, ನ್ಯಾಯಬಾಹಿರವಾಗಿದ್ದಲ್ಲಿ ಅಥವಾ ದುಬಾರಿಯಿದ್ದಲ್ಲಿ ಸಂಕಷ್ಟಕ್ಕೊಳಗಾದ ಅರ್ಜಿದಾರ ಮೊದಲ ಮೇಲ್ಮನವಿ ಅಧಿಕಾರಿಗೆ ಮನವಿ ಸಲ್ಲಿಸಬಹುದು.

4. ನಿಜ. ಕಾಯ್ದೆಯ ಸೆಕ್ಷನ್ 20(1)ರ ಅನ್ವಯ ಮಾಹಿತಿ ಆಯೋಗ ಹಣದ ರೂಪದ ದಂಡ ವಿಧಿಸಬಹುದು.

5.ಇಲ್ಲ. ಮಾಹಿತಿ ಆಯೋಗಕ್ಕೆ ದೂರು ನಿರ್ವಹಿಸಲು ಸಮಯ ಮಿತಿ ನಿಗದಿಪಡಿಸಿಲ್ಲ.

(ಮೂಲ: ಆರ್‌ಟಿಐ ಟೈಮ್ಸ್ ಜೂನ್ & ಜುಲೈ 2007)

ನವದೆಹಲಿಯ ಸಿಹೆಚ್‌ಆರ್‌ಐನ ಬೆಂಬಲದೊಂದಿಗೆ ಕ್ರಿಯೇಟ್ ಜುಲೈ-ಸೆಪ್ಟೆಂಬರ್ 2007 ಅವಧಿಯಲ್ಲಿ ಕರ್ನಾಟಕದಲ್ಲಿ ಮಾಹಿತಿ ಹಕ್ಕು ವಿಷಯಕ್ಕೆ ಸಂಬಂಧಪಟ್ಟಂತೆ ಚಟುವಟಿಕೆಗಳ ವಿವರ

- ಆಗಸ್ಟ್7, 2007ರಂದು ಚಾರ್ಟೆಡ್ ಅಕೌಂಟೆಂಟ್ಸ್ ಆಫ್ ಇಂಡಿಯಾದ ಕರ್ನಾಟಕ ವಿಭಾಗ ಕಾರ್ಯಾಗಾರವನ್ನು ಬೆಂಗಳೂರಿನಲ್ಲಿ ಏರ್ಪಡಿಸಿತ್ತು. ಶ್ರೀ ಅರವಿಂದ್ ಕೆಜರಿವಾಲ ಮುಖ್ಯ



ಭಾಷಣಕಾರರು. ಪಾಲ್ಗೊಂಡ ಇತರ ಗಣ್ಯರಲ್ಲಿ ಲೋಕಾಯುಕ್ತ ಜಸ್ಟೀಸ್ ಸಂತೋಷ್ ಹೆಗಡೆ, ಕರ್ನಾಟಕ ಮಾಹಿತಿ ಆಯೋಗದ ಮುಖ್ಯಾ ಆಯುಕ್ತ ಶ್ರೀ ಕೆ.ಕೆ.ಮಿಶ್ರಾ, ಎನ್‌ಎಲ್‌ವಿಐಸಿಯ ಡಾ.ವಿಜಯಕುಮಾರ್, ಕ್ರಿಯಾಕಟ್ಟೆ ಮತ್ತು ಸಿಐವಿಐಸಿಯ ಶ್ರೀಮತಿ ಕಾತ್ಯಾಯಿನಿ ಚಾಮ್ರಾಜ್ ಸೇರಿದ್ದರು. ಈ ಸಂದರ್ಭದಲ್ಲಿ ಕ್ರಿಯೇಟ್ ಮಾಹಿತಿ ಕಾಯ್ದೆ ಬಳಸುವವರ ಕೈಪಿಡಿ ಮತ್ತು ಕರಪತ್ರಗಳನ್ನು 200 ಪ್ರತಿನಿಧಿಗಳಿಗೆ ವಿತರಿಸಿತು.

- ಆಗಸ್ಟ್ 20, 2007ರಂದು ಬೆಂಗಳೂರಿನ ಕೆಎಸ್‌ಆರ್‌ಟಿಸಿ ಸಭಾಂಗಣದಲ್ಲಿ ಕೆಎಸ್‌ಆರ್‌ಟಿಸಿ ಅಧಿಕಾರಿಗಳಿಗೆ ಸೆಕ್ಷನ್ 4(1ಬಿ) ಕೆಳಗಿನ ನೋಟಿಫಿಕೇಷನ್ ಕುರಿತು ತರಬೇತಿ ಶಿಬಿರ ನಡೆಯಿತು. ಬಿಎಂಟಿಸಿ ನೋಟಿಫಿಕೇಷನ್ ತಯಾರಿಯಲ್ಲಿ ಕ್ರಿಯೇಟ್‌ನ ಸಹಾಯ ಕೇಳಿತ್ತು. ಕ್ರಿಯೇಟ್ ಕರಡು ಪ್ರತಿಯನ್ನು ಪರಿಶೀಲಿಸಿತು ಮತ್ತು ಸಲಹೆ ನೀಡಿತು. ಅಲ್ಲದೆ ಬಿಎಂಟಿಸಿ ತನ್ನೆಲ್ಲ ಪಿಐಓಗಳಿಗೆ ಮಾಹಿತಿ ಹಕ್ಕು ಕಾಯ್ದೆ ಕುರಿತು ಸಭೆ ನಡೆಸಿಕೊಡಲು ವಿನಂತಿಸಿತ್ತು. ಈ ಸಭೆ ಆಗಸ್ಟ್ 22ರಂದು ಬಿಎಂಟಿಸಿಯ ಮುಖ್ಯಾಲಯ ಸಭಾಂಗಣದಲ್ಲಿ ಜರುಗಿತು. ಬಿಎಂಟಿಸಿಯ ಮುಖ್ಯ ಕಾನೂನು ಅಧಿಕಾರಿ ಶ್ರೀ ಮನೋಹರ್ ಇದನ್ನು ಸಂಘಟಿಸಿದ್ದರು. 40 ಅಧಿಕಾರಿಗಳು ಪಾಲ್ಗೊಂಡಿದ್ದರು. ಮಾಹಿತಿ ಕಾಯ್ದೆಯ ಬಗ್ಗೆ ಮಾತನಾಡಿದ ಶ್ರೀ ವೈ.ಜಿ. ಮುರಳೀಧರ್ ಭಾಗವಹಿಸಿದವರ ಪ್ರಶ್ನೆಗಳಿಗೆ ಉತ್ತರಿಸಿದರು.

- ಕರ್ನಾಟಕ ರಾಜ್ಯ ಕಾನೂನು ಸೇವಾ ಪ್ರಾಧಿಕಾರ ಮತ್ತು ಹೈಕೋರ್ಟ್ ಕಾನೂನು ಸೇವಾ ಸಮಿತಿ ಕ್ರಿಯೇಟ್ ಸಂಸ್ಥೆಯನ್ನು ನಾಗರಿಕರಲ್ಲಿ ಮಾಹಿತಿ ಜಾಗೃತಿಯ ಕುರಿತು ಸಮೀಕ್ಷೆ ನಡೆಸುವ ವಿಚಾರದಲ್ಲಿ ಚರ್ಚಿಸಲು ಆಹ್ವಾನಿಸಿದ್ದವು. ಹೈಕೋರ್ಟ್‌ನ ಸಮಾವೇಶ ಭವನದಲ್ಲಿ ಆಗಸ್ಟ್ 6, 2007ರಂದು ಈ ಸಭೆ ಜರುಗಿತು. ಜಸ್ಟೀಸ್ ಗೋಪಾಲ ಗೌಡ ಮತ್ತು ಜಸ್ಟೀಸ್ ಮಂಜುನಾಥ ಪಾಲ್ಗೊಂಡಿದ್ದರು. ಕಾನೂನು ಕಾಲೇಜುಗಳ 25ಕ್ಕೂ ಹೆಚ್ಚು ಪ್ರಾಂಶುಪಾಲರು ಹಾಜರಿದ್ದರು. ಸಮಿಕ್ಷೆಗೆ ಮುನ್ನ ಪಾಲ್ಗೊಳ್ಳುವವರಿಗೆ ತರಬೇತಿ ಅಥವಾ ಕಾರ್ಯಾಗಾರ ನಡೆಸುವುದು ಸೂಕ್ತ ಎಂದು ಸಭೆಯಲ್ಲಿ ಭಾಗವಹಿಸಿದ ಶ್ರೀ ವೈ.ಜಿ. ಮುರಳೀಧರನ್ ಸಲಹೆ ನೀಡಿದರು. ಈ ಮಾತು ಸರ್ವಾನುಮತದ ಒಪ್ಪಿಗೆ ಪಡೆಯಿತು. ಎಲ್ಲ ಪ್ರಾಂಶುಪಾಲರು, ಶಿಕ್ಷಕರು ಮತ್ತು ಈ ಕಾನೂನು ಕಾಲೇಜುಗಳ ಕೆಲ ಆಯ್ದ ವಿದ್ಯಾರ್ಥಿಗಳಿಗೆ ತರಬೇತಿ ಕೊಡಲು ಸಭೆ ತೀರ್ಮಾನಿಸಿತು.

- ಈ ಕಾರ್ಯಾಗಾರ ಆಗಸ್ಟ್ 25,2007ರಂದು ನಡೆಯಿತು. ಸಂಪನ್ಮೂಲ ವ್ಯಕ್ತಿಯಾಗಿ ಪಾಲ್ಗೊಂಡ ಶ್ರೀ ವೈ.ಜಿ. ಮುರಳೀಧರನ್ 'ಮಾಹಿತಿ ಹಕ್ಕಿನ ವಾಸ್ತವ ಜಾರಿ ಹಾಗೂ ಮಾಹಿತಿ ಕಾಯ್ದೆ ಕುರಿತ ನಾಗರಿಕರ ದೃಷ್ಟಿಕೋನ' ವಿಚಾರವನ್ನು ಪ್ರಸ್ತುತಪಡಿಸಿದರು.

- 14 ಆಗಸ್ಟ್ 2007ರಲ್ಲಿ ಕ್ರಿಯೇಟ್ ಸಿಹೆಚ್‌ಆರ್‌ಐ ಜೊತೆಗೂಡಿ ಮಾಹಿತಿ ಹಕ್ಕು ಆಡಿಟ್ ಕುರಿತ ಒಂದು ದಿನದ ಶಿಬಿರವನ್ನು ಆಯೋಜಿಸಿತ್ತು. ಎನ್‌ಎಲ್‌ಎಸ್‌ಐಯುನಲ್ಲಿ ಹಮ್ಮಿಕೊಂಡಿದ್ದ ಇದರಲ್ಲಿ 30ಕ್ಕೂ ಮೀರಿದ ಪ್ರತಿನಿಧಿಗಳು ಭಾಗವಹಿಸಿದ್ದರು. ಸಿಹೆಚ್‌ಆರ್‌ಐನ ಶ್ರೀ ವೆಂಕಟೇಶ ನಾಯಕ್ ಅಧ್ಯಕ್ಷತೆ ವಹಿಸಿದ್ದರು. ಕರ್ನಾಟಕದ ವಿವಿಧ ಭಾಗಗಳಲ್ಲಿ ಮಾಹಿತಿ ಹಕ್ಕಿನ ಜಾರಿ ಕುರಿತಂತೆ ಸಮೀಕ್ಷೆಗೆ ಅಗತ್ಯವಾದ ಮಾದರಿಯನ್ನು ರೂಪಿಸುವುದು ಕಾರ್ಯಾಗಾರದ ಉದ್ದೇಶವಾಗಿತ್ತು.

28 ಸೆಪ್ಟೆಂಬರ್ 2007ರಂದು ಕ್ರಿಯೇಟ್ ಬೆಂಗಳೂರಿನ ವಿವೇಕಾನಂದ ಕಾನೂನು ಕಾಲೇಜಿನ ಜೊತೆ ಅರಿವಿನ ಹಕ್ಕು ದಿನವನ್ನು ವಿಶೇಷವಾಗಿ ಆಚರಿಸಿತು. ಕಾಲೇಜಿನ ಪ್ರಾಂಶುಪಾಲ ಶ್ರೀ ಕೆಂಪೇಗೌಡ ಉದ್ಘಾಟಿಸಿದರು. ಶ್ರೀ ವೈ.ಜಿ. ಮುರಳೀಧರನ್ ಮಾತನಾಡಿ, R2K ದಿನದ ಮಹತ್ವ, ಭಾರತದ ಮಜಲಿನಲ್ಲಿ ಅದರ ಅಗತ್ಯಗಳ ಕುರಿತು ಉಪನ್ಯಾಸ ನೀಡಿದರು. ಅಲ್ಲದೆ 2005ರ ಮಾಹಿತಿ ಹಕ್ಕು ಕಾಯ್ದೆಯನ್ನು ವಿವರಿಸಿದ ಮುರಳೀಧರನ್ ಕಾನೂನು ವಿದ್ಯಾರ್ಥಿಗಳ ಹಲವು ಪ್ರಶ್ನೆಗಳಿಗೆ ಉತ್ತರಿಸಿದರು. ನೂರಕ್ಕೂ ಮಿಕ್ಕು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಹೊಸದಾಗಿ ಆರಂಭವಾದ ಕಸ್ತೂರಿ ಚಾನೆಲ್ ಈ ಎಲ್ಲವನ್ನೂ ದಾಖಲಿಸಿಕೊಂಡದ್ದಲ್ಲದೆ, ವೈ.ಜಿ. ಮುರಳೀಧರನ್‌ರ ಜೊತೆ ಪುಟ್ಟ ಸಂದರ್ಶನವನ್ನೂ ತೆಗೆದುಕೊಂಡಿತು.

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ :
ಗ್ರಾಹಕರ ಹಕ್ಕು ಶಿಕ್ಷಣ ಮತ್ತು ಜಾಗೃತಿ ವೇದಿಕೆ
ನಂ.239,5ನೇ ಸಿ ಮುಖ್ಯರಸ್ತೆ, ರೆಮ್ಕೊ ಬಡಾವಣೆ, ಹಂಪಿನಗರ, ಬೆಂಗಳೂರು-560104,
ದೂರವಾಣಿ : 91-080-23357280, Email :creatorg@sify.com Website : www.creatindia.org